ಸಂಪುಟ : 8 ಸಂಚಿಕೆ : 181 ಪುಟ : 4 ಬೆಲೆ : 3.00 ಮಂಗಳವಾರ ಆಗಸ್ಟ್ 22, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 181 Pages : 4 Price : 3.00 Tuesday August 22, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಆಗಸ್ಟ್ 29 ರಂದು ಮೇಜರ್ ಧ್ಯಾನ್‌ಚಂದ ರವರ ಹುಟ್ಟು ಹಬ್ಬದ ಪ್ರಯುಕ್ತ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಜಿಲ್ಲೆಯಲ್ಲಿ ಆಚರಿಸುವ ಸಲುವಾಗಿ 16 ರಿಂದ 29 ವರ್ಷದೊಳಗಿನ ವಯೋಮಾನದ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಜಿಲ್ಲೆಯ ಕೆ,ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಆ. 29 ರಂದು ಬೆಳಗ್ಗೆ 9 ಘಂಟೆಯಿಂದ ಸಂಜೆಯವರೆಗೆ ಶೆಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಬಾಸ್ಕೆಟ್‌ಬಾಲ್, ಖೋ-ಖೋ, ವಾಲಿಬಾಲ್, ಹಾಕಿ (ಪೆನಾಲ್ಟಿ ಶೂಟ್-ಔಟ್), ನಡಿಗೆ ಸ್ಪರ್ಧೆ, ಹಗ್ಗ ಜಗ್ಗಾಟ, ಲಿಂಬು ಚಮಚ ಓಟ, ಮಿನಿ ಪುಟ್‌ಬಾಲ್(3 ಗಿಖ 3) ವಿವಿಧ ಸ್ಪರ್ಧೆಗಳನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದೆ.

16 ವರ್ಷದಿಂದ 29 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಗದಗ ಜಿಲ್ಲೆಯ ಕ್ರೀಡಾಪಟುಗಳು ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣ ಗದಗ ಇವರ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 08372-238345 ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ರೋಣ ತಾಲೂಕಿನ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಪರಿಷ್ಕರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ರೋಣ ತಾಲೂಕಿನ ಸ್ಥಿರಾಸ್ತಿಗಳ ಬೆಲೆಯನ್ನು 2023-24ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ, ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳ ಪ್ರಕಾರ ಪರಿಷ್ಕರಿಸಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕರಡು ಪ್ರತಿಯನ್ನು ಉಪ ನೋಂದಣಿ ಅಧಿಕಾರಿಗಳ ಕಚೇರಿ, ರೋಣ ಸೂಚನಾ ಫಲಕದಲ್ಲಿ ಸಾರ್ವಜನಿಕರ ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳಿಗಾಗಿ ಪ್ರಕಟಿಸಲಾಗಿದೆ. ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳು ಇದ್ದಲ್ಲಿ ಸಂಬಂಧಪಟ್ಟವರು ಸೂಕ್ತ ದಾಖಲೆಗಳೊಂದಿಗೆ ಸೆಪ್ಟೆಂಬರ್ 5 ರೊಳಗಾಗಿ ರೋಣ ಉಪನೋಂದಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ



■ ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ರವಿವಾರದಂದು ಬೆಳಿಗ್ಗೆ 6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಕು.ರೇಣುಕಾ ಎಸ್. ಬೇಲೆರಿ ಅವರಿಂದ "ಸುಗಮ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಕು.ಭರತ ಟಿ ದರೋಜಿ ಇವರಿಂದ "ಶಾಸ್ತ್ರೀಯ ಸಂಗೀತ" ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಶ್ರೀಮತಿ ಸಾವಿತ್ರಿ ಎಂ. ಲಮಾಣಿ ಇವರಿಂದ "ಜಾನಪದ/ಭಾವಗೀತೆಗಳ" ಕಾರ್ಯಕ್ರಮಗಳು ಜರುಗಿದವು.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ಹೊಯ್ಸಳ ಕೆಳದಿ ಚನ್ನಮ್ಮ ಪ್ರಶಸ್ತಿ ಯೋಜನೆಯಡಿ ಜಿಲ್ಲಾ ಮಟ್ಟದ ಅಸಾಧಾರಣ ಪ್ರತಿಭಾ ಪುರಸ್ಕಾರಕ್ಕಾಗಿ ನಾವೀನ್ಯತೆ, ತಾರ್ಕಿಕ, ಕ್ರೀಡೆ, ಕಲೆ, ಸಾಂಸ್ಕೃತಿಕ ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಜಿಲ್ಲಾ ಮಟ್ಟದಲ್ಲಿ ಅಸಾಧಾರಣ ಪ್ರತಿಭಾ ಪುರಸ್ಕಾರ ಪ್ರಶಸ್ತಿಯನ್ನು ನೀಡಲು 5 ರಿಂದ 18 ವರ್ಷದ ಒಳಗಿನ ವಯೋಮಿತಿಯೊಳಗಿರುವ ಮಕ್ಕಳಿಗೆ ಪ್ರತಿ ಕ್ಷೇತ್ರದಲ್ಲಿ ಇಬ್ಬರು ಮಕ್ಕಳಂತೆ ಒಟ್ಟು 8 ಮಕ್ಕಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದೆ.

ಅಸಾಧಾರಣ ಸಾಧನೆ ಮಾಡಿದ ಮಕ್ಕಳು ಅಸಾಧಾರಣಾ ಪ್ರತಿಭಾ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಸಲ್ಲಿಸಬೇಕು.

ನಾವೀನ್ಯತೆ, ತಾರ್ಕಿಕ, ಕ್ರೀಡೆ, ಕಲೆ, ಸಾಂಸ್ಕೃತಿಕ, ಸಂಗೀತ (ಮೂರು ಸೇರಿ ಒಂದು ಕ್ಷೇತ್ರ) ಈ ಕ್ಷೇತ್ರಗಳಲ್ಲಿ ತಮಗೆ ಸಂಬಂಧಿಸಿದ ಒಂದು ಕ್ಷೇತ್ರಕ್ಕೆ ಮಾತ್ರ ಆಯ್ಕೆ ಮಾಡಿಕೊಳ್ಳುವುದು. ಪ್ರತಿಭೆ ಹೊಂದಿರುವ ಬಗ್ಗೆ ಪ್ರಮುಖ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಪತ್ರಿಕೆ ತುಣುಕುಗಳನ್ನು ಲಗತ್ತಿಸಬೇಕು. ಅಂತಾರಾಷ್ಟ್ರೀಯ ಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲೂಕಾ ಮಟ್ಟದಲ್ಲಿ ಭಾಗವಹಿಸಿರುವ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು. ಸಾಧಿಸಿರುವ ಪ್ರತಿಭೆಯನ್ನು ಸಮರ್ಥಿಸಲು ಸಂಬಂಧಿಸಿದ ಕ್ಷೇತ್ರದ ಛಾಯಾಚಿತ್ರ ಲಗತ್ತಿಸಬೇಕು. ಆಯ್ಕೆ ಮಾಡುವ ಕ್ಷೇತ್ರದ ಬಗ್ಗೆ ನಾಲ್ಕು ಸಾಲುಗಳಲ್ಲಿ ಮಾಹಿತಿ ಒದಗಿಸುವುದು. ಪ್ರಶಸ್ತಿಗಾಗಿ ಆಯ್ಕೆ ಮಾಡುವ ಮಕ್ಕಳು ಕನಿಷ್ಠ 5 ವರ್ಷ ಕರ್ನಾಟಕ ರಾಜ್ಯದಲ್ಲಿ ನೆಲಸಿರತಕ್ಕದ್ದು. ಪ್ರಶಸ್ತಿಗೆ ಅರ್ಜಿ ಸಲ್ಲಿಸಿದ ನಂತರ ಮಗು ಮರಣ ಹೊಂದಿದಲ್ಲಿ ಆ ಮಗು ಪ್ರಶಸ್ತಿಗೆ ಅರ್ಹವಾಗಿದ್ದಲ್ಲಿ ಮರಣೋತ್ತರ ಪ್ರಶಸ್ತಿಗೆ ಪರಿಗಣಿಸಬಹುದಾಗಿದೆ.

ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಅರ್ಜಿಗಳನ್ನು ಪಡೆದು ಸೆಪ್ಟೆಂಬರ್ 5ರೊಳಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಕೊಠಡಿ ಸಂ.006, ಜಿಲ್ಲಾ ಆಡಳಿತ ಭವನ ಗದಗ (ದೂರವಾಣಿ ಸಂ.08372-220711) ಇಲ್ಲಿ ಕಚೇರಿ ಸಮಯದಲ್ಲಿ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿಯೇ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ.

### ದಿನವಿಡೀ ಕಾದರೂ ಕೆಲಸವಾಗುತ್ತಿಲ್ಲ / ರೇಶನ್ ಕಾರ್ಡ್ ತಿದ್ದುಪಡಿ ಕೇಂದ್ರಕ್ಕೆ ತಪ್ಪದ ಅಲೆದಾಟ

# ಸರ್ವರಿಗೂ ತಲೆನೋವಾದ ಸರ್ವರ್ ಸಮಸ್ಯೆ




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸರಕಾರದ ಗ್ಯಾರಂಟಿ ಯೋಜನೆಗಳ ಲಾಭ ಪಡೆಯಲು ಸಾರ್ವಜನಿಕರಿಗೆ ಆಧಾರ್, ಪಡಿತರ ಚೀಟಿ ತಿದ್ದುಪಡಿ, ಎಲ್ಲ ದಾಖಲೆಗಳಿಗೆ ಆಧಾರ್ ಲಿಂಕ್ ಮಾಡುವುದೂ ಸೇರಿದಂತೆ ದಾಖಲೆಗಳ ತಿದ್ದುಪಡಿ ಅನಿವಾರ್ಯವಾಗಿದೆ. ಆದರೆ, ಈ ಎಲ್ಲ ಕಾರ್ಯಗಳಿಗೂ ಸರ್ವರ್ ಸಮಸ್ಯೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಸರಕಾರದ ಗೃಹಲಕ್ಷ್ಮೀ, ಅನ್ನಭಾಗ್ಯ ಯೋಜನೆಗೆ ಪಡಿತರ ಕಾರ್ಡ್ ಕಡ್ಡಾಯವಾಗಿದ್ದು, ಇದೀಗ ಎಲ್ಲೆಡೆ ಪಡಿತರ ಚೀಟಿ ತಿದ್ದುಪಡಿಗಾಗಿ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದೆ. ಆದರೆ ಪ್ರತಿನಿತ್ಯ ಸರ್ವರ್ ಸಮಸ್ಯೆ ಎದುರಾಗುತ್ತಿರುವುದರಿಂದ, ಸಿಎಸ್‌ಸಿ, ಗ್ರಾಮ ಒನ್ ಮುಂತಾದ ತಿದ್ದುಪಡಿ ಕೇಂದ್ರಗಳಲ್ಲಿ ನಿತ್ಯವೂ ಜನರು ಗುಂಪುಗುಂಪಾಗಿ ಸೇರುತ್ತಿದ್ದು, ಗದ್ದಲದ ವಾತಾವರಣ ಸೃಷ್ಟಿಯಾಗುತ್ತಿದೆ.

ಆಗಸ್ಟ್ 18ರಿಂದ ಪ್ರಾರಂಭವಾದ ರೇಶನ್ ಕಾರ್ಡ್ ತಿದ್ದುಪಡಿ ಪ್ರಕ್ರಿಯೆಗೆ ಆಗಸ್ಟ್ 21ವರಗೆ ಕೇವಲ 4 ದಿನ ಕಾಲಾವಕಾಶ ನೀಡಲಾಗಿತ್ತು. ಆದರೆ ಸರ್ವರ್ ಸಮಸ್ಯೆಯಲ್ಲಿಯೇ 4 ದಿನ ಕಳೆದುಹೋಗಿದ್ದು, ಈ 4 ದಿನಗಳಲ್ಲಿ ಲಕ್ಷ್ಮೇಶ್ವರ, ಶಿರಹಟ್ಟಿ ತಾಲೂಕಿನಲ್ಲಿ ಕೇವಲ 8-10 ಪಡಿತರ ಕಾರ್ಡ್‌ಗಳ ತಿದ್ದುಪಡಿ ಮಾತ್ರ ಸಾಧ್ಯವಾಗಿದೆ ಎನ್ನಲಾಗಿದೆ. ಬೆಳಗ್ಗೆಯಿಂದಲೇ ಸರ್ವರ್ ಮತ್ತಿತರ ತಾಂತ್ರಿಕ ಸಮಸ್ಯೆ ತಲೆದೋರಿದ್ದು, ಜನರು ಕೆಲಸ ಬಿಟ್ಟು ಬೆಳಿಗ್ಗೆಯಿಂದಲೇ ಬಂದು, ಸಾಯಂಕಾಲದವರೆಗೂ ಕಾದು ವಾಪಸಾಗಿದ್ದಾರೆ. ಸರ್ವರ್ ಸಮಸ್ಯೆಯಿಂದ ತಿದ್ದುಪಡಿ ಕೇಂದ್ರದವರು ಕೂಡ ದಿನವಿಡೀ ಕಂಪ್ಯೂಟರ್ ಮುಂದೆ ಕುಳಿತರೂ ಒಂದೂ ಕಾರ್ಡ್ ತಿದ್ದುಪಡಿ ಮಾಡಲು ಸಾಧ್ಯವಾಗದೇ ಬೇಸತ್ತಿದ್ದು, ವಿನಾಕಾರಣ ಜನರಿಂದ ಬೈಗುಳ ಕೇಳುವಂತಾಗಿದೆ. ಅರ್ಜಿ ಹಾಕಲು ಬೆಳಿಗ್ಗೆ 12ರಿಂದ ಸಂಜೆ 4 ಗಂಟೆಯವರೆಗೆ ಸಮಯ ನಿಗದುಪಡಿಸಿದ್ದು, ಕಾರ್ಡ್‌ಗಳಲ್ಲಿ ಹೆಸರು ತಿದ್ದುಪಡಿ, ಹೆಸರು ಸೇರ್ಪಡೆ, ವಿಳಾಸ ಬದಲಾವಣೆ ಇತ್ಯಾದಿಗಳಿಗೆ ಜನರು ಅಲೆಯುತ್ತಿದ್ದಾರೆ.

ಸರಕಾರ ಈ ಎಲ್ಲ ಸಮಸ್ಯೆಗಳನ್ನು ಗಮನಿಸಿ, ಇದೀಗ ತಿದ್ದುಪಡಿಗಾಗಿ ಇರುವ ಗಡುವನ್ನು ವಿಸ್ತರಿಸಿ ಆದೇಶ ಹೊರಡಿಸಿದ್ದು, ನಿಗದಿತ ಸಮಯದೊಳಗೆ ತಿದ್ದುಪಡಿ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ. ಎಷ್ಟೇ ಕಾಲಾವಕಾಶ ನೀಡಿದರೂ ಸರ್ವರ್ ಸಮಸ್ಯೆ ಸರಿಯಾಗದಿದ್ದರೆ, ಈ ಅಲೆದಾಟ ತಪ್ಪಿದ್ದಲ್ಲ ಎನ್ನುತ್ತಾರೆ ತಿದ್ದುಪಡಿ ಕೇಂದ್ರಗಳ ಸಿಬ್ಬಂದಿಗಳು.

> ಸಾಕಷ್ಟು ಜನರು ಆಧಾರ್, ರೇಷನ್ ಕಾರ್ಡ್ ತಿದ್ದುಪಡಿಗಾಗಿ ಸೇವಾ ಕೇಂದ್ರಗಳಿಗೆ ಬಂದು, ಸರ್ವರ್ ಸಮಸ್ಯೆಯಿಂದ ವಾಪಸ್ಸು ಹೋಗುತ್ತಿರುವ ಕುರಿತು ಮಾಹಿತಿ ಬಂದಿದೆ. ರಾಜ್ಯಾದ್ಯಂತ ಈ ಸರ್ವರ್ ಸಮಸ್ಯೆ ತಲೆದೋರಿದೆ. ಈ ಕುರಿತಂತೆ ಮೇಲಾಧಿಕಾರಿಗಳಿಗೆ ತಿಳಿಸಲಾಗಿದ್ದು, ಶೀಘ್ರವೇ ಸಮಸ್ಯೆಯನ್ನು ಬಗೆಹರಿಸಲಾಗುತ್ತದೆ.
>
> **- ಜಗದೀಶ ಕುರುಬರ.**
>
> ಆಹಾರ ನಿರೀಕ್ಷಕರು, ಶಿರಹಟ್ಟಿ-ಲಕ್ಷ್ಮೇಶ್ವರ.

> ಮೂರು ದಿನದಿಂದ ನಾವು ಆನ್‌ಲೈನ್ ಕೇಂದ್ರಕ್ಕೆ ಬರುತ್ತಿದ್ದೇವೆ. ಆದರೆ, ಸರ್ವರ್ ಸಮಸ್ಯೆ ಎಂದು ತೋರಿಸುತ್ತಿದೆ. ನಾವು ಕೆಲಸ ಬಿಟ್ಟು ಬೆಳಿಗ್ಗೆಯಿಂದ ಸಾಯಂಕಾಲವರೆಗೂ ಕಾದು ಹಿಂದಿರುಗುತ್ತಿದ್ದೇವೆ. ಅಧಿಕಾರಿಗಳಿಗೆ ಕೇಳಿದರೆ ಸರ್ವರ್ ಸಮಸ್ಯೆ ಇಲ್ಲಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಆಗಿದೆ. ಬಗೆಹರಿಸುತ್ತಾರೆ ಎಂದಷ್ಟೇ ಹೇಳುತ್ತಾರೆ. ಸಂಬಂಧಿಸಿದವರು ಕೂಡಲೇ ಸರ್ವರ್ ಸಮಸ್ಯೆ ಬಗೆಹರಿಸಬೇಕು ಮತ್ತು ಅರ್ಜಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡಬೇಕು.
>
> **- ಕಸ್ತೂರವ್ವ ಸೂರಣಗಿ, ಗಂಗವ್ವ ಉಪ್ಪಾರ, ಸ್ಥಳೀಯರು.**

## ಆ. 31ರಂದು ನುಲಿಯ ಚಂದಯ್ಯ ಜಯಂತಿ; ಅಪರ ಡಿಸಿ ಅನ್ನಪೂರ್ಣ



■ ವಿಜಯಸಾಕ್ಷಿ ಸುದ್ದಿ, ಗದಗ

ನುಲಿಯ ಚಂದಯ್ಯ ಜಯಂತಿಯನ್ನು ಆಗಸ್ಟ್ 31 ರಂದು ಬೆ.11 ಗಂಟೆಗೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ವ್ಯವಸ್ಥಿತವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರದಂದು ನುಲಿಯ ಚಂದಯ್ಯ ಜಯಂತಿ ಆಚರಿಸುವ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಯಕ ಯೋಗಿ, ಬಸವಣ್ಣವರ ಸಮಕಾಲೀನರಾದ ನುಲಿಯ ಚಂದಯ್ಯನವರು ಪ್ರಮುಖ ಶರಣರಲ್ಲಿ ಒಬ್ಬರಾಗಿದ್ದು, ತಮ್ಮ ವಚನಗಳ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡಿದ್ದಾರೆ. ನುಲಿಯ ಚಂದಯ್ಯ ಜಯಂತಿಯನ್ನು ಅರ್ಥಪೂರ್ಣವಾಗಿ ಹಾಗೂ ತಾಲೂಕು ಮಟ್ಟದಲ್ಲಿಯೂ ಆಚರಿಸಲಾಗುವುದು. ಶಿಷ್ಟಾಚಾರದನ್ವಯ ಜಯಂತಿ ಕಾರ್ಯಕ್ರಮದ ಆಮಂತ್ರಣ ಮುದ್ರಣಕ್ಕೆ ಕ್ರಮ ವಹಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಕಾರ್ಯಕ್ರಮದ ವೇದಿಕೆ ವ್ಯವಸ್ಥೆ, ಬ್ಯಾನರ್ ಅಳವಡಿಕೆ, ಉಪನ್ಯಾಸಕರ ನೇಮಕ ಕುರಿತು ಚರ್ಚಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ ಸರ್ವರಿಗೂ ಸ್ವಾಗತಿಸಿ ವಂದಿಸಿದರು. ಸಭೆಯಲ್ಲಿ ಸುರೇಶ ಕಟ್ಟಿಮನಿ, ಪ್ರೊ. ಕೆ.ಎಚ್.ಬೇಲೂರು, ಹುಲ್ಲೇಶ ಭಜಂತ್ರಿ, ರಾಮು ಭಜಂತ್ರಿ, ಮೋಹನ ಭಜಂತ್ರಿ, ಬಸವರಾಜ ಭಜಂತ್ರಿ, ಪರಶುರಾಮ ಕಟ್ಟಿಮನಿ, ಮೋಹನ ಕಟ್ಟಿಮನಿ, ಪರಶುರಾಮ ಗೋಕಾವಿ, ಪರಶುರಾಮ ಗಡಾದ, ಅಶೋಕ ಕಟ್ಟಿಮನಿ, ಎಚ್.ವಿ. ವೀರಾಪುರ, ವೈ.ಜಿ.ಗಡಾದ, ಭೀಮಸಿಂಗ್ ಕೊರವರ, ಸೇರಿದಂತೆ ಸಮುದಾಯದ ಗಣ್ಯರು, ಹಿರಿಯರು, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

## ಬಿಎಲ್‌ಓ ಕರ್ತವ್ಯಕ್ಕೆ ಗೈರು: ಗ್ರಾಮ ಆಡಳಿತಾಧಿಕಾರಿ ಅಮಾನತ್ತು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಾರ್ಯದಲ್ಲಿ ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ ಪಟ್ಟಣದ ಬಸ್ತಿಬಣ ಗ್ರಾಮ ಆಡಳಿತ ಅಧಿಕಾರಿ ವ್ಹಿ.ವ್ಹಿ ಶಿರೂರ ಅವರನ್ನು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಅಮಾನತ್ತುಗೊಳಿಸಿದ್ದಾರೆ.



ಲಕ್ಷ್ಮೇಶ್ವರ ಮತಗಟ್ಟೆ ಸಂಖ್ಯೆ 103ರ ಮತಗಟ್ಟೆ ಅಧಿಕಾರಿಯಾಗಿದ್ದ ವ್ಹಿ.ವ್ಹಿ ಶಿರೂರ ಅವರು ಬಿಎಲ್‌ಓ ಕರ್ತವ್ಯ ನಿರ್ವಹಿಸಲು ಅನಧಿಕೃತವಾಗಿ ಗೈರು ಹಾಜರಾಗಿದ್ದರು. ಆ.7ರಿಂದ ಇಲ್ಲಿಯವರೆಗೂ ಅನಧಿಕೃತವಾಗಿ ಗೈರು ಮತ್ತು ಆ.12ರಂದು ಕರೆಯಲಾಗಿದ್ದ ಸಭೆಗೂ ಗೈರಾಗಿದ್ದರು. ಮತಗಟ್ಟೆ ಸಂಖ್ಯೆ 103ಕ್ಕೆ ಮತಗಟ್ಟೆ ಅಧಿಕಾರಿಯಾಗಿದ್ದರೂ ಮನೆ ಮನೆ ಸಮೀಕ್ಷೆ ಪ್ರಾರಂಭಿಸಿರಲಿಲ್ಲ. ಅಲ್ಲದೆ ಅಧಿಕಾರಿಗಳ ದೂರವಾಣಿ ಕರೆಗಳನ್ನು ಸಹ ಸ್ವೀಕರಿಸುತ್ತಿಲ್ಲ. ಕರ್ತವ್ಯ ಲೋಪದಿಂದ ಕಚೇರಿ ಕೆಲಸ ಮತ್ತು ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದ್ದು, ಈ ನೌಕರರ ಮೇಲೆ ಕ್ರಮ ಕೈಗೊಳ್ಳುವಂತೆ ಲಕ್ಷ್ಮೇಶ್ವರ ತಹಸೀಲ್ದಾರರು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ ಹಿನ್ನಲೆಯಲ್ಲಿ ವಿಚಾರಣೆಯನ್ನು ಕಾಯ್ದಿರಿಸಿದ ಜಿಲ್ಲಾಧಿಕಾರಿಗಳು ಅಮಾನತ್ತು ಆದೇಶ ಮಾಡಿದ್ದಾರೆ.

ಮತದಾರ ಪಟ್ಟಿಗಳ ಪರಿಷ್ಕರಣೆ ಮಾಡಲು ಚುನಾವಣಾ ಆಯೋಗ ಮನೆ ಮನೆಗೆ ತೆರಳಿ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಜುಲೈ 21ರಿಂದ ಆಗಸ್ಟ್ 21ರವರೆಗೆ ವೇಳಾಪಟ್ಟಿ ನಿಗದಿ ಮಾಡಿದೆ. ಆಯೋಗದ ಮಾರ್ಗಸೂಚಿಯಂತೆ ನಿಗದಿತ ನಮೂನೆಗಳಲ್ಲಿ ಬಿಎಲ್‌ಓಗಳು ಮಾಹಿತಿ ಕ್ರೋಢೀಕರಿಸಿ ಸಲ್ಲಿಸಬೇಕೆಂಬ ಆದೇಶವಿದ್ದರೂ ಕರ್ತವ್ಯದಲ್ಲಿ ತೋರಿದ ನಿರ್ಲಕ್ಷದಿಂದ ಅಮಾನತ್ತಿಗೊಳಗಾಗಿದ್ದಾರೆ.

### ಜಿಲ್ಲಾಸ್ಪತ್ರೆಯ ರೋಗಿಗಳಿಗೆ ಹಾಲು ವಿತರಿಸುವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

## ಹಾಲೆರೆವ ಹಬ್ಬವನ್ನು ಹಾಲು ಕುಡಿಸುವ ಹಬ್ಬವನ್ನಾಗಿ ಆಚರಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕಲ್ಲು ನಾಗರಕ್ಕೆ ಹಾಲೆರೆಯುವುದು ಅಂಧಶ್ರದ್ಧೆಯಾಗಿದೆ. ಬದಲಾಗಿ, ಬಡ ಮಕ್ಕಳಿಗೆ, ರೋಗಿಗಳಿಗೆ, ಹಸಿದವರಿಗೆ ಹಾಲನ್ನು ಕುಡಿಸಬೇಕು. ಹಾಲೆರೆಯುವ ಹಬ್ಬವನ್ನು ಹಾಲು ಕುಡಿಸುವ ಹಬ್ಬವನ್ನಾಗಿ ಆಚರಿಸಬೇಕು ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ತಿಳಿಸಿದರು.



ನಾಗರ ಪಂಚಮಿ ನಿಮಿತ್ತ ಗದಗ ಜಿಲ್ಲಾ ಆಸ್ಪತ್ರೆಯ ರೋಗಿಗಳಿಗೆ ಹಾಲು ವಿತರಿಸುವ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿ, ಹಾವುಗಳು ಹಾಲನ್ನು ಸೇವಿಸುವುದಿಲ್ಲ. ಹಾವುಗಳು ಮನುಷ್ಯನಿಗೆ ಉಪಕಾರಿಯಾಗಿದ್ದು, ಇಲಿ, ಹೆಗ್ಗಣ ಮತ್ತಿತರ ಪ್ರಾಣಿಗಳನ್ನು ತಿಂದು ರೈತರ ಬೆಳೆ, ದವಸ-ಧಾನ್ಯಗಳನ್ನು ಸಂರಕ್ಷಿಸುತ್ತವೆ. ಹಾವುಗಳನ್ನು ಯಾರೂ ಕೊಲ್ಲಬಾರದು, ಸಂರಕ್ಷಿಸಬೇಕು. 12ನೇ ಶತಮಾನದಲ್ಲಿ ಬಸವಾದಿ ಶರಣರು 'ಕಲ್ಲ ನಾಗರಕ್ಕೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ' ಎಂಬ ವಚನದಲ್ಲಿ ಮೌಢ್ಯತೆಯ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಹೀಗಿದ್ದರೂ, ಆಧುನಿಕ ಕಾಲಘಟ್ಟದಲ್ಲಿ ಜನರಲ್ಲಿ ಮೂಢನಂಬಿಕೆಗಳು ಹೆಚ್ಚುತ್ತಿರುವುದಕ್ಕೆ ಶ್ರೀಗಳು ವಿಷಾದ ವ್ಯಕ್ತಪಡಿಸಿದರು.

ಗದಗ ಜಿಲ್ಲಾ ಆಸ್ಪತ್ರೆಯ ವಿವಿಧ ವಿಭಾಗಗಳನ್ನು ವೀಕ್ಷಿಸಿದ ಪೂಜ್ಯರು, ವೈದ್ಯರ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಬಡ ಗ್ರಾಮೀಣ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆಗಳು ಲಭಿಸುತ್ತಿರುವುದು ಸಂತೋಷವನ್ನುಂಟುಮಾಡಿದೆ ಎಂದು ಶ್ರೀಗಳು ತಿಳಿಸಿದರು. ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಸ್ವಾಗತಿಸಿದರು. ಸರ್ಜನ್ ಡಾ. ಕರಿಗೌಡರ, ಡಾ. ಹಳೇಮನಿ, ಡಾ. ರೇಖಾ ಸೋನಾವನೆ, ಶೇಖಣ್ಣ ಕವಳಿಕಾಯಿ, ಬಾಲಚಂದ್ರ ಭರಮಗೌಡ, ಪ್ರಕಾಶ ಅಸುಂಡಿ, ಶೆಖಣ್ಣ ಕಳಸಾಪೂರ, ದಾನಯ್ಯ ಗಣಾಚಾರಿ, ವಿ.ಕೆ ಕರಿಗೌಡರ, ಅರಳಿ ಶೇಖಣ್ಣ, ಸುರೇಶ ನಿಲೂಗಲ್, ಗೌರಕ್ಕ ಬಡಿಗಣ್ಣವರ, ರೇಣುಕಾ ಕರಿಗೌಡರ, ಶಿವಣ್ಣ ಮುಗದ ಬಸವದಳ, ಬಸವಕೇಂದ್ರ, ಜಾಗತಿಕ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಚಿವರಿಂದ ಡಾ. ನಾಗರಕಟ್ಟಿಯವರಿಗೆ ಸನ್ಮಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲೆಯ ಉಸ್ತುವಾರಿ ಸಚಿವರಾದ ಎಚ್.ಕೆ ಪಾಟೀಲರ ಆಶಯದಂತೆ ಕರ್ನಾಟಕ ಸರಕಾರದಿಂದ ಐಎಫ್‌ಎಸ್ ಅಧಿಕಾರಿ ಮನೋಜಕುಮಾರ ನೇತೃತ್ವದಲ್ಲಿ ಗದಗ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಕಾರ್ಯ ನಿರ್ವಹಿಸಿ, 804 ಕೋಟಿ ರೂ.ಗಳ ಗದಗ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿ ವರದಿಯನ್ನು ಸಲ್ಲಿಸಲಾಗಿತ್ತು.

ಈ ಸಮಿತಿಯ ಸದಸ್ಯರಾಗಿ ನೇಮಕಗೊಂಡ ಗದಗ ಜಿಲ್ಲಾ ಕಸಾಪ ಕಾರ್ಯದರ್ಶಿಗಳು ಹಾಗೂ ಉಪನ್ಯಾಸಕರಾದ ಡಾ. ಕಿಶೋರಬಾಬು ಜೆ.ನಾಗರಕಟ್ಟಿಯವರನ್ನು ಸಚಿವರಾದ ಎಚ್.ಕೆ ಪಾಟೀಲರು ಲಕ್ಕುಂಡಿಯಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಗೌರವಪೂರ್ವಕವಾಗಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಮನೋಜಕುಮಾರ, ಸದಸ್ಯ ಕಾರ್ಯದರ್ಶಿ ಜಗದೀಶ ಜಿ., ಗದಗ ಜಿಲ್ಲೆಯ ಡಿಸಿಎಫ್ ದೀಪಿಕಾ ಬಾಜಪೇಯಿ, ಸಹಕಾರ ರೆಡಿಯೋ ನಿರ್ದೇಶಕ ಜೆ.ಕೆ ಜಮಾದಾರ, ಕರ್ನಾಟಕ ಚಲನಚಿತ್ರ ಮಂಡಳಿ ಅಧ್ಯಕ್ಷ ಆರ್.ಆರ್ ಓದುಗೌಡರ, ಗದಗ ಜಿ ಪಂ ಮಾಜಿ ಅಧ್ಯಕ್ಷ ಶಿದ್ಲಿಂಗೇಶ್ವರ ಪಾಟೀಲ, ಲಕ್ಕುಂಡಿ ಗ್ರಾ ಪಂ ಅಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದು ಶುಭ ಕೋರಿದರು.

## ಸಾರ್ವಜನಿಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಲಕ್ಷ್ಮೇಶ್ವರ ಉಪ ನೋಂದಣಿ ಕಚೇರಿ ವ್ಯಾಪ್ತಿಯಲ್ಲಿ ಬರುವ ಪಟ್ಟಣ ವ ಗ್ರಾಮಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಗಳನ್ನು 2023-24ನೇ ಸಾಲಿಗೆ ಪರಿಷ್ಕರಿಸಿ ನಿರ್ಧರಿಸಲು, ಪ್ರಸ್ತಾವಿತ ನೂತನ ದರಗಳ ಕರಡು ಪ್ರತಿಯನ್ನು ಸಾರ್ವಜನಿಕರ ಮಾಹಿತಿ ಉಪನೋಂದಣಿ ಕಚೇರಿಯಲ್ಲಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಸಾರ್ವಜನಿಕರ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತ ರೂಪದಲ್ಲಿ ಪ್ರಕಟಣೆಯ 15 ದಿನಗಳೊಳಗೆ ಸಲ್ಲಿಸಬಹುದಾಗಿದೆ ಎಂದು ಲಕ್ಷ್ಮೇಶ್ವರ ಉಪನೋಂದಣಿ ಅಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಸಾಕ್ಷಿ ಸುಭಾಷಿತ

ತ್ಯಾಗದಿಂದ ದೊರಕುವ ಆನಂದವು ಅರ್ಣನೀಯ.
ಅದನ್ನು ಯಾರೂ ನಮ್ಮಿಂದ ಕಿತ್ತುಕೊಳ್ಳಲಾರರು.
–ಸ್ವಾಮಿ ವಿವೇಕಾನಂದ

## ಸಂಪಾದಕೀಯ

# ನಾವಿಕನಿಲ್ಲದ ದೋಣಿಯಲ್ಲಿ ಬಿಜೆಪಿ

ವಿಧಾನಸಭೆ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಬಿಜೆಪಿಗೆ ಈವರೆಗೆ ಪ್ರತಿಪಕ್ಷ ನಾಯಕನ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಮತ್ತೊಂದೆಡೆ ಸಮರ್ಥ ರಾಜ್ಯಾಧ್ಯಕ್ಷರೂ ಇಲ್ಲ. ಈ ಮಧ್ಯೆ ಪಕ್ಷ ತೊರೆಯಲು ಮುಂದಾಗಿರುವ ನಾಯಕರನ್ನು ಮನವೊಲಿಸಿ, ಪಕ್ಷದಲ್ಲೆ ಉಳಿಯುವಂತೆ ಮಾಡುವ ಟ್ರಬಲ್ ಶೂಟರ್ ಸಹ ಇಲ್ಲ.

ಒಟ್ಟಾರೆ ಭಾರತೀಯ ಜನತಾ ಪಕ್ಷ ನಾವಿಕನಿಲ್ಲದ ದೋಣಿಯಲ್ಲಿ ಸಾಗುತ್ತಿದೆ. ಲೋಕಸಭೆ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಬಾಂಬೆ ಬಾಯ್ಸ್ ಮತ್ತೆ ಕಾಂಗ್ರೆಸ್ ತೆಕ್ಕೆಗೆ ಜಾರುತ್ತಿರುವುದು ಬಿಜೆಪಿ ರಾಜ್ಯ ನಾಯಕರಿಗೆ ಬಿಸಿ ತುಪ್ಪವಾಗಿ ಬದಲಾಗಿದೆ.

ಪಕ್ಷ ತೊರೆಯಲು ಮುಂದಾದ ನಾಯಕರ ಮನವೊಲಿಕೆ ಈವರೆಗೆ ಸಾಧ್ಯವಾಗದ ಹಿನ್ನೆಲೆಯಲ್ಲಿ ಮತ್ತೆ ಬಿ.ಎಸ್. ಯಡಿಯೂರಪ್ಪ ಮೊರೆ ಹೋಗಿದ್ದಾರೆ. ಯಡಿಯೂರಪ್ಪ ಮಧ್ಯ ಪ್ರವೇಶಿಸಿದರೂ ಅತೃಪ್ತ ಶಾಸಕರು ಬಿಎಸ್‌ವೈ ಮಾತಿಗೆ ಬೆಲೆ ಕೊಟ್ಟು ಪಕ್ಷದಲ್ಲಿ ಉಳಿಯುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ.

ಇನ್ನು ಬಿಎಸ್‌ವೈ ಹೊರತಾಗಿ ನಳಿನಕುಮಾರ ಕಟೀಲ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಪ್ರಹ್ಲಾದ್ ಜೋಶಿ ಸಾಕಷ್ಟು ಪ್ರಯತ್ನ ನಡೆಸಿದರೂ ಅತೃಪ್ತರು ತೃಪ್ತರಾಗುತ್ತಿಲ್ಲ. ಖುದ್ದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಎಸ್‌ವೈಗೆ ಕರೆ ಮಾಡಿದರೂ ಅತೃಪ್ತಿ ಶಮನವಾಗದಿರುವುದು ಕೇಂದ್ರ ನಾಯಕರಿಗೆ ಸಂಕಷ್ಟ ತಂದೊಡ್ಡಿದೆ.

ಅಷ್ಟಕ್ಕೂ ರಾಜ್ಯ ಬಿಜೆಪಿಯ ಇಂದಿನ ದುಸ್ಥಿತಿಗೆ ಹೈಕಮಾಂಡ್ ಸಂಸ್ಕೃತಿಯೆ ಕಾರಣ. ಪ್ರತಿಯೊಂದಕ್ಕೂ ಹೈಕಮಾಂಡ್ ಸೂಚನೆ ಮೇರೆಗೆ ನಿರ್ಣಯ ತೆಗೆದುಕೊಳ್ಳಬೇಕಾದ ಅನಿವಾರ್ಯತೆಯಿಂದ ರಾಜ್ಯ ಘಟಕ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಪರಿಣಾಮ ಕಣ್ಣ ಮುಂದಿದೆ.

ಇನ್ನೊಂದೆಡೆ ರಾಜ್ಯ ನಾಯಕರ ಮಾತಿಗೆ ಕೇಂದ್ರ ಬಿಜೆಪಿ ನಾಯಕರು ಕಿವಿಯಾಗದಿರುವುದು, ರಾಜ್ಯಗಳ ವಿಧಾನಸಭೆ ಚುನಾವಣೆಗಿಂತ ಲೋಕಸಭೆ ಮೇಲೆಯೇ ಬಿಜೆಪಿ ಹೆಚ್ಚು ಗಮನ ಕೇಂದ್ರೀಕರಿಸಿರುವುದು ದೇಶದ ಅನೇಕ ರಾಜ್ಯಗಳಲ್ಲಿ ಬಿಜೆಪಿಯ ಕಮಲ ನಿಧಾನಕ್ಕೆ ಬಾಡುತ್ತಿದೆ.

ನಾವಿಕನಿಲ್ಲದ ದೋಣಿ ಸಾಗುವ ದಿಕ್ಕನ್ನು ಗಾಳಿಯೇ ನಿರ್ಧರಿಸುತ್ತದೆ. ಆ ಗಾಳಿ ಯಾವುದು ಎನ್ನುವುದು ಖುದ್ದು ಬಿಜೆಪಿ ನಾಯರಿಗೆ ಸದ್ಯಕ್ಕೆ ಗೊತ್ತಾಗುತ್ತಿಲ್ಲ.

# ಶ್ರೀ ಮೈಲಾರಲಿಂಗೇಶ್ವರ ಸನ್ನಿಧಿಯಲ್ಲಿ ಶ್ರಾವಣ ಪೂಜೆ



■ ವಿಜಯಸಾಕ್ಷಿ ಸುದ್ದಿ, ಲಕ್ಷೇಶ್ವರ

ಪಟ್ಟಣದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಸದ್ಭಕ್ತ ಮಂಡಳಿಯಿಂದ ಶ್ರಾವಣ ಮಾಸ ಪರ್ಯಂತ ವಿಶ್ವಶಾಂತಿ, ಕಲ್ಯಾಣ ಮತ್ತು ಧರ್ಮ ಜಾಗೃತಿಗಾಗಿ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ನಿತ್ಯ ಬೆಳಿಗ್ಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಶಿವಾಷ್ಟೋತ್ತರ, ರಾಜೋಪಚಾರ, ಮಹಮಂಗಳಾರತಿ, ತೀರ್ಥಪ್ರಸಾದ ವಿತರಣೆ ಕಾರ್ಯಕ್ರಮಗಳು ಜರುಗಲಿವೆ.

ಸೆ.15ರಂದು ದೇವಸ್ಥಾನದಿಂದ ಶಿಬಾರಕ್ಕೆ ಉತ್ಸವ ಮೂರ್ತಿ ಮೆರವಣಿಗೆ, ಅನ್ನಸಂತರ್ಪಣೆ ಜರುಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



ಲಕ್ಷ್ಮೇಶ್ವರದ ಹಾವಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಮೊದಲ ಶನಿವಾರ ಆಂಜನೇಯ ಮೂರ್ತಿಗೆ ಬೆಣ್ಣೆಯಿಂದ ವಿಶೇಷ ಅಲಂಕಾರ ಪೂಜೆ ನೆರವೇರಿಸಲಾಯಿತು. ನೂರಾರು ಭಕ್ತರು ದೇವರ ದರ್ಶನ ಪಡೆದರು.



ದೇಶ ಮತ್ತು ರಾಜ್ಯ ಕಂಡ ಅಪರೂಪದ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ 108ನೇ ಜಯಂತಿ ಹಿನ್ನೆಲೆಯಲ್ಲಿ ರವಿವಾರ ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಎಲ್.ಗುಂಜೀಕರ ಅವರು ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಿಬ್ಬಂದಿಗಳಿಗೆ ಸಧ್ಭಾವನಾ ದಿನಾಚರಣೆಯ ಪ್ರತಿಜ್ಞೆ ಭೋದಿಸಿದರು. ಈ ಸಂದರ್ಭದಲ್ಲಿ ಓಬಿಸಿ ಅಧಿಕಾರಿ ಡಾ. ಬಸವರಾಜ ಬಳ್ಳಾರಿ ಸೇರಿದಂತೆ ಹಲವರಿದ್ದರು.

ಶ್ರೀ ರಂಭಾಪುರಿ ಪೀಠದ ಶ್ರಾವಣ ತಪೋನುಷ್ಠಾನ ಕಾರ್ಯಕ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಮೌಲ್ಯಗಳ ಉಳಿವು ಅಳಿವು ಮಾನವನ ಆಚರಣೆಯಲ್ಲಿದೆ

■ ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಮೌಢ್ಯತೆಯ ಮಾರಿ ಮನುಷ್ಯನನ್ನು ಆವರಿಸಿದೆ. ನ್ಯಾಯ-ನೀತಿ, ಧರ್ಮದ ಅರಿವು ಇಲ್ಲದಂತಾಗಿ ಕವಲು ದಾರಿಯಲ್ಲಿ ಸಿಲುಕಿದ್ದಾನೆ. ನಿಜವಾದ ಮೌಲ್ಯಗಳ ಉಳಿವು ಅಳಿವು ಮಾನವನ ಆಚರಣೆಯಲ್ಲಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಭಾನುವಾರ ಶ್ರೀ ರಂಭಾಪುರಿ ಪೀಠದಲ್ಲಿ ಶ್ರಾವಣ ತಪೋನುಷ್ಠಾನ ಹಾಗೂ ಲಿಂ.ಶ್ರೀ ರಂಭಾಪುರಿ ಶಿವಾನಂದ ಜಗದ್ಗುರುಗಳವರ ಲಿಂಗಾಂಗ ಸಾಮರಸ್ಯದ 76ನೇ ಪುಣ್ಯ ಸ್ಮರಣೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ದೊಡ್ಡ ಮನಸ್ಸು ಮತ್ತು ದೊಡ್ಡ ಗುಣಗಳಿಂದ ಸತ್ಕಾರ್ಯಗಳನ್ನು ಮಾಡುವುದರಿಂದ ಮನುಷ್ಯ ದೊಡ್ಡವನೆನಿಸಿಕೊಳ್ಳಲು ಸಾಧ್ಯ. ವಿದ್ಯೆ ಎಂದರೆ ಕೇವಲ ಅಕ್ಷರ ಜ್ಞಾನವಲ್ಲ. ಜಗದಲ್ಲಿ ಹೇಗೆ ಬಾಳಬೇಕೆಂಬುದನ್ನು ಕಲಿಸುವ ಆತ್ಮ ಜ್ಞಾನವೇ ನಿಜವಾದ ವಿದ್ಯೆ. ಒಳ್ಳೆಯ ಮನಸ್ಸಿನಿಂದ ಯೋಚಿಸಿದರೆ ಕೆಟ್ಟವರಲ್ಲೂ ಒಳ್ಳೆತನವನ್ನು ಕಾಣಬಹುದು.



ಲಿಂ.ಶ್ರೀ ರಂಭಾಪುರಿ ಶಿವಾನಂದ ಜಗದ್ಗುರುಗಳ ಕ್ರಿಯಾ ಸಮಾಧಿ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ ಶ್ರೀ ರಂಭಾಪುರಿ ಜಗದ್ಗುರುಗಳು ಗದ್ದುಗೆಯ ಶಿವಲಿಂಗ ಮೂರ್ತಿಗೆ ಕಿರೀಟ ಧಾರಣೆ ಮಾಡಿ ಗೌರವ ಸಮರ್ಪಿಸಿದರು. ನಂತರ ಲಿಂ.ಶ್ರೀ ಜಗದ್ಗುರು ಶಿವಾನಂದ ವಿದ್ಯಾರ್ಥಿ ನಿಲಯದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ಗುಚ್ಛ ಧರಿಸಿ 250 ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಿ ಶುಭ ಹಾರೈಸಿದರು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ಸಂಗ್ರಹಿಸಿದ ಶ್ರೀಮದ್ರಂಭಾಪುರಿ ಶಿವಾನಂದ ಜಗದ್ಗುರುಗಳ ನುಡಿ ಬಿಂದುಗಳನ್ನು ಒಳಗೊಂಡ 'ಮರೆಯಲಾರದ ಮಾಣಿಕ್ಯ' ಎಂಬ ಕಿರು ಕೃತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆಗೊಳಿಸಿದರು.

ಆದರೆ ಕೆಟ್ಟ ಮನಸ್ಸಿನಿಂದ ಯೋಚಿಸಿದರೆ ಒಳ್ಳೆಯವರಲ್ಲೂ ಕೆಟ್ಟದ್ದೇ ಕಾಣುತ್ತದೆ. ಸುಣ್ಣದ ನೀರು ಹಾಲಿನಂತೆ ಕಂಡರೂ ಅದರ ಒಳಗಿನ ರೂಪ ಬೇರೆಯೇ ಇರುತ್ತದೆ ಎಂಬುದರ ಅರಿವನ್ನು ಭಕ್ತ ಸಂಕುಲಕ್ಕೆ ತಲುಪಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸಿದ ಕೀರ್ತಿ ರಾಜಾಧಿರಾಜ ಪೂಜಿತರಾದ ಲಿಂ.ಶ್ರೀ ರಂಭಾಪುರಿ ಶಿವಾನಂದ ಜಗದ್ಗುರುಗಳಿಗೆ ಸಲ್ಲುತ್ತದೆ. ಶ್ರೀ ರಂಭಾಪುರಿ ಪೀಠದ ಹೆಸರಿನಲ್ಲಿ ಅವರ ಹೆಸರು ಎಂದೆಂದಿಗೂ ಸದಾ ಹಸಿರಾಗಿದೆ.

ಅವರ ಆದರ್ಶಗಳನ್ನು ಪರಿಪಾಲಿಸಿ ಮುನ್ನಡೆಯುವುದೇ ನಮ್ಮ ಧ್ಯೇಯವಾಗಿದೆ ಎಂದರು.

ಮಾದನ ಹಿಪ್ಪರಗಿ ಹಿರೇಮಠದ



ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ವೀರಶೈವ ಧರ್ಮದಲ್ಲಿ ಗುರುವಿಗೆ ಬಹು ದೊಡ್ಡ ಸ್ಥಾನವಿದೆ.


ಜಗದ ಜನರ ಅಜ್ಞಾನ ಕಳೆದು ಜ್ಞಾನವನ್ನು ಉಂಟು ಮಾಡುವುದೇ ಗುರು ಧರ್ಮವಾಗಿದೆ. ಶ್ರೀ ಜಗದ್ಗುರು ರಂಭಾಪುರಿ ಪೀಠದ ನವನಿರ್ಮಾಣ ಶಿಲ್ಪಿ ಲಿಂ.ಶ್ರೀ ಶಿವಾನಂದ ಜಗದ್ಗುರುಗಳು ಬದುಕಿನುದ್ದಕ್ಕೂ ಧರ್ಮ ಸಂಸ್ಕೃತಿಯನ್ನು ಎತ್ತಿ ಹಿಡಿದರೆಂದರು.

ಲಿಂ.ಶ್ರೀ ರಂಭಾಪುರಿ ಜಗದ್ಗುರು ಶಿವಾನಂದ ರಾಜೇಂದ್ರ ಪುಣ್ಯ ಸ್ಮರಣೋತ್ಸವ ಸಮಾರಂಭದಲ್ಲಿ ಬೊಗಸೆ ಬಿ.ಎಲ್ ಬೋಜೇಗೌಡರು, ಬೆಳಗೊಳ ಶಿವಶಂಕರ, ಶಿರವಾಸೆ ವಿಶ್ವನಾಥ, ಪ್ರಶಾಂತ ರಿಪ್ಪನ್‌ಪೇಟೆ, ಶಶಿಕುಮಾರ ಸುರಗೀಮಠ, ಪ್ರಭುದೇವ ಕಲ್ಮಠ, ಲೆಕ್ಕಾಧಿಕಾರಿ ಸಂಕಪ್ಪನವರ, ವಿರೂಪಾಕ್ಷ ಶಾಸ್ತ್ರಿ, ಸಿದ್ಧೇಶ್ವರ ಶಾಸ್ತ್ರಿ, ತುಮಕೂರು ಪವನ್ ಕುಮಾರ್, ಲಕ್ಷ್ಮೇಶ್ವರದ ರಾಜಶೇಖರ-ಶಿವಲಿಂಗಯ್ಯ ಹಾಲೇವಾಡಿಮಠ ಸಹೋದರರು ಪಾಲ್ಗೊಂಡು ಜಗದ್ಗುರುಗಳಿಂದ ಆಶೀರ್ವಾದ ಪಡೆದರು.


ಅಬ್ಬಿಗೇರಿ-ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಹಾಗೂ ಖಾಂಡ್ಯ ಮತ್ತು ಜಾಗರ ಹೋಬಳಿ ಶಿಷ್ಯ ಸಮುದಾಯದಿಂದ ಅನ್ನ ದಾಸೋಹ ನೆರವೇರಿತು.

ಗಂಗಾಧರ ಹಿರೇಮಠ ಇವರಿಂದ ಭಕ್ತಿ ಗೀತೆ ಜರುಗಿತು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು.

# ಬೀಚಿ ಬಳಗಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ







■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ದಶಮಾನೋತ್ಸವದ ಹೊಸ್ತಿಲಲ್ಲಿರುವ ನರೇಗಲ್ಲದ ಬೀಚಿ ಬಳಗಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ಈಚೆಗೆ ನಡೆಯಿತು.

ಇಲ್ಲಿನ ಹಿರೇಮಠದ ಸಭಾಭವನದಲ್ಲಿ ಸಭೆ ಸೇರಿದ್ದ ಬೀಚಿ ಬಳಗದ ಸರ್ವ ಸದಸ್ಯರು, ಇಂದಿನ ಅಧ್ಯಕ್ಷರನ್ನೊಳಗೊಂಡಂತೆ ಈ ಹಿಂದಿನ ಎಲ್ಲ ಅಧ್ಯಕ್ಷರಿಗೆ ನೂತನ ಪದಾಧಿಕಾರಿಗಳ ಆಯ್ಕೆಯನ್ನು ಮಾಡುವ ಅಧಿಕಾರ ನೀಡಿದ್ದರು. ಅದರಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಆಯ್ಕೆ ಪಟ್ಟಿಯನ್ನು ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ ಬಳಗದ ಸಭೆಯಲ್ಲಿ ಘೋಷಿಸಿದರು.

ಗೌರವಾಧ್ಯಕ್ಷರು-ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರು, ಹಾಲಕೆರೆ ಸಂಸ್ಥಾನ ಮಠ. ನೇತೃತ್ವ-ಷ. ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು, ಹಿರೇಮಠ ನರೇಗಲ್ಲ. ಅಧ್ಯಕ್ಷರು-ಕೆ.ಎಸ್ ಕಳಕಣ್ಣವರ, ಉಪಾಧ್ಯಕ್ಷರು-ನಿರ್ಮಲಾ ಹಿರೇಮಠ, ಆರ್.ಎಸ್ ನರೇಗಲ್ಲ, ಸಂಚಾಲಕರು-ಈಶ್ವರ ಬೆಟಗೇರಿ, ಕಾರ್ಯದರ್ಶಿ-ಎಚ್.ವಿ ಈಟಿ, ಖಜಾಂಚಿ-ಶಿಯೋಗಿ ಜಕ್ಕಲಿ ಹಾಗೂ ಇನ್ನುಳಿದ ಮಂಡಳಿಯನ್ನು ರಚಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ವಹಿಸಲಾಯಿತು.

ಇದೇ ಸಂದರ್ಭದಲ್ಲಿ ದಶಮಾನೋತ್ಸವದ ಸವಿ ನೆನಪಿನಲ್ಲಿ ಸ್ಮರಣ ಸಂಚಿಕೆಯೊಂದನ್ನು ಹೊರತರಲು ನಿರ್ಧರಿಸಿದ್ದು, ಅದಕ್ಕಾಗಿಯೂ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು.

ಪ್ರಧಾನ ಸಂಪಾದಕರು-ಡಾ. ಎಸ್.ಜಿ ಗುರಿಕಾರ, ಸಂಪಾದಕರು-ಡಾ. ಕಲ್ಲಯ್ಯ ಹಿರೇಮಠ, ಸಂಪಾದಕ ಮಂಡಳಿ-ದೊಡ್ಡಯ್ಯ ಅರವಟಗಿಮಠ, ಎಂ.ಎಸ್ ದಢೇಸೂರಮಠ, ಡಾ. ಆರ್.ಕೆ ಗಚ್ಚಿನಮಠ, ಅರುಣ ಬಿ. ಕುಲಕರ್ಣಿ, ಎಸ್.ಸಿ ಗುಳಗಣ್ಣವರ, ಎಸ್.ವಿ ಹಳ್ಳಿಕೇರಿ, ಜಿ.ಜಿ ಕೋಟಿ, ಎಂ.ಕೆ ಬೇವಿನಕಟ್ಟಿ ಮತ್ತು ರಾಜಶೇಖರಗೌಡ ಪಾಟೀಲರನ್ನು ಸ್ಮರಣ ಸಂಚಿಕೆಗೆ ನೇಮಿಸಲಾಯಿತು.

# 'ಬೀಚಿ ಸ್ಮರಣ ಸಂಚಿಕೆ'ಗೆ ಲೇಖನ, ಕವನಗಳ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಬರುವ ಡಿಸೆಂಬರ್‌ನಲ್ಲಿ ನರೇಗಲ್ಲ ಬೀಚಿ ಬಳಗದ ದಶಮಾನೋತ್ಸವವನ್ನು ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ಹೊರತರಲು ನಿರ್ಧರಿಸಲಾಗಿದೆ. ಅದಕ್ಕಾಗಿ ಲೇಖನಗಳನ್ನು, ಕವನಗಳನ್ನು ಆಸಕ್ತರಿಂದ ಆಹ್ವಾನಿಸಲಾಗಿದೆ.

ಲೇಖನಗಳು, ಕವನಗಳು ಮುಖ್ಯವಾಗಿ ಬೀಚಿಯವರಿಗೆ ಸಂಬಂಧಿಸಿದ್ದಾಗಿರಬೇಕು. ಇನ್ನುಳಿದಂತೆ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು, ಕವನಗಳನ್ನೂ ಕಳಿಸಬಹುದು. ಆದರೆ ಮುಖ್ಯ ಆದ್ಯತೆ ಬೀಚಿಯವರಿಗೆ. ಲೇಖನಗಳು ಒಂದೂವರೆಯಿಂದ ಎರಡು ಪುಟಗಳಷ್ಟಿರಬೇಕು. ಕವನಗಳು 25 ಸಾಲುಗಳ ಮಿತಿಯಲ್ಲಿರಬೇಕು. ಲೇಖನಗಳು, ಕವನಗಳು ಅಕ್ಟೋಬರ್ 15ರೊಳಗೆ ಈ ಕೆಳಗೆ ನೀಡಿರುವ ಇ-ಮೇಲ್ ವಿಳಾಸಗಳಿಗೆ ಕಳಿಸಬೇಕು. ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ ಜೊತೆ ನೀಡಿರುವ ನಂಬರ್‌ಗಳಿಗೆ ಕರೆ ಮಾಡಿ ತಿಳಿದುಕೊಳ್ಳಬಹುದು. ಇ-ಮೇಲ್ ಇಲ್ಲದವರು ವಾಟ್ಸಾಪ್ ಮೂಲಕವೂ ತಮ್ಮ ಕವನ, ಲೇಖನಗಳನ್ನು ಕಳಿಸಬಹುದು ಎಂದು ಬೀಚಿ ಬಳಗದ ಪ್ರಕಟಣೆ ತಿಳಿಸಿದೆ.

ಡಾ. ಎಸ್. ಜಿ. ಗುರಿಕಾರ ಪ್ರಧಾನ ಸಂಪಾದಕರು-shivu. ggurikar@gmail.com. ವಾಟ್ಸಾಪ್ ನಂ-9686082030(ಕೇವಲ ಲೇಖನಗಳು ಮಾತ್ರ). ಡಾ. ಕಲ್ಲಯ್ಯ ಎಸ್. ಹಿರೇಮಠ-ಸಂಪಾದಕರು kallayyahiremath33@gmail.com, ವಾಟ್ಸಾಪ್ ನಂ-9480037808(ಕೇವಲ ಲೇಖನಗಳು ಮಾತ್ರ.) ಎಚ್.ವಿ ಈಟಿ-ಕಾರ್ಯದರ್ಶಿಗಳು-huchcheerappaiti@gmail.com ವಾಟ್ಸಾಪ್ ನಂ.-7676918585(ಕೇವಲ ಕವನಗಳು ಮಾತ್ರ.) ಲೇಖನ, ಕವನಗಳ ಪ್ರಕಟಣೆಗೆ ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ ಎಂದು ಬೀಚಿ ಬಳಗದ ಪ್ರಕಟಣೆ ತಿಳಿಸಿದೆ.

# ನಾಗರಪಂಚಮಿ ಹಬ್ಬದ ಸಂಭ್ರಮ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಾಗರ ಪಂಚಮಿ ಹಬ್ಬದ ಹಿನ್ನೆಲೆಯಲ್ಲಿ ಮುಂಜಾನೆಯೇ ಮನೆಯನ್ನು ಶೃಂಗರಿಸಿ ಪೂಜಾ ಕಾರ್ಯಕ್ರಮ ನೆರವೇರಿಸಿದ ಮಹಿಳೆಯರು, ಮಕ್ಕಳು ಹೊಸ ಉಡುಗೆ ತೊಟ್ಟು ತಮ್ಮ ಓಣಿಯ ನಾಗ ದೇವರ ಮೂರ್ತಿಗೆ ಹಾಲೆರೆದರು. ನಾಗಮೂರ್ತಿಗೆ ಹಂಗನೂಲು, ಕೊಕ್ಕಬತ್ತಿ ಕಡ್ಲಿ ಉಸುಳಿ, ಅಳ್ಳಿನ ಜೋಳ, ಅಳ್ಳಿಟ್ಟು, ಬೆಲ್ಲ ಹೀಗೆ ಸಾಂಪ್ರದಾಯಿಕ ನೈವೇದ್ಯದೊಂದಿಗೆ ಪೂಜೆ ಸಲ್ಲಿಸಿದರು. ಸಕಲ ಸನ್ಮಂಗಲಗಳುಂಟಾಗಲಿ ಎಂದು ಬಂಧು-ಬಳಗದವರ ಹೆಸರು ಹೇಳಿ ನಾಗಮೂರ್ತಿಗೆ ಭಕ್ತಿಯಿಂದ ಹಾಲೆರೆಯುವ ಮೂಲಕ ನಾಗರ ಪಂಚಮಿ ಹಬ್ಬ ಆಚರಿಸಿದರು.

ಪಟ್ಟಣದ ಸೊಪ್ಪಿಕೇರಿ, ಪೇಠಬಣ, ಬಸ್ತಿಕೇರಿ, ಹಳ್ಳದಕೇರಿ, ಉಪನಾಳ ನಗರ, ಅಂಬೇಡ್ಕರ ನಗರ, ವಿನಾಯಕನಗರ, ಈಶ್ವರ ನಗರದ ಸೇರಿ ಹೊಸ ಬಡಾವಣೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಡಗರ ಸಂಭ್ರಮದ ನಾಗರಪಂಚಮಿ ಹಬ್ಬ ಆಚರಿಸಲಾಯಿತು. ಮಕ್ಕಳು ಉತ್ಸಾಹದಿಂದ ಜೋಕಾಲಿ ಜೀಕುತ್ತಿದ್ದ ದೃಶ್ಯ ಅಲ್ಲಲ್ಲಿ ಕಂಡು ಬಂದಿತು. ಮನೆಯಲ್ಲಿ ಶೇಂಗಾ, ಕಡಲೆ, ಡಾಣಿ-ಗುಳಗಿ ಉಂಡೆ ಮತ್ತು ಚಕ್ಕುಲಿ ವಿವಿಧ ಖಾದ್ಯಗಳನ್ನು ಸಿದ್ಧಪಡಿಸಿ ಸವಿದರು.



ಗ್ರಾಮೀಣ ಭಾಗದಲ್ಲಿ ಮರಗಳಿಗೆ ಜೋಕಾಲಿ ಕಟ್ಟಿ ಜೋಕಾಲಿ ಜೀಕುವುದರ ಜೊತೆಗೆ ಕೆಲ ಕಸರತ್ತಿನ ಗ್ರಾಮೀಣ ಕ್ರೀಡೆಗಳನ್ನು ಆಡಿ ಹರ್ಷ ಪಟ್ಟರು. ಯುವಕರು ನಿಂಬೆ ಹಣ್ಣು ಎಸೆತ, ಗೋಲಿ ಎಸೆತ, ಕಣ್ಣಿಗೆ ಬಟ್ಟೆ ಕಟ್ಟಿ ಮನೆ ಅಥವಾ ಪ್ರದೇಶ ಗುರುತಿಸುವಂತಹ ಮೋಜಿನ ಆಟಗಳನ್ನೂ ಆಡಿ ಹರ್ಷಪಟ್ಟರು.

# ನಾಗಮೂರ್ತಿಗೆ ವಿಶೇಷ ಪೂಜೆ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣವೂ ಸೇರಿದಂತೆ ತಾಲೂಕಿನೆಲ್ಲೆಡೆ ನಾಗರ ಪಂಚಮಿ ಹಬ್ಬದ ಪ್ರಯುಕ್ತ ಭಾನುವಾರ ನಾಗರ ಮೂರ್ತಿಗೆ ತಂಬಿಟ್ಟು, ಉಂಡಿ ಹಣ್ಣು-ಕಾಯಿ ನೇವೇದ್ಯ ಮಾಡಿ, ಪಾರ್ಥನೆ ಸಲ್ಲಿಸಿ ಹಾಲೆರೆದು ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು.

ಸ್ಥಳೀಯ ಕೋಟೆ ಭಾಗದ ಶ್ರೀ ಆಂಜನೇಯ ದೇವಸ್ಥಾನ, ಶ್ರೀ ಅಂಬಾಭವಾನಿ ದೇವಸ್ಥಾನ,



ಶ್ರೀ ವೀರಭದ್ರೇಶ್ವರ ದೇವಸ್ಥಾನ, ಸಾಯಿ ಮಂದಿರ, ಕನ್ನಿಕಾಪರಮೇಶ್ವರಿ ದೇವಸ್ಥಾನ ಮೊದಲಾದ ದೇವಸ್ಥಾನಗಳ ದೇವರ ಸನ್ನಿಧಿಯಲ್ಲಿ ವಿಶೇಷ ಪೂಜೆ ನಡೆಯಿತು. ಕೆಲವರು ಪಟ್ಟಣದ ಹೊರವಲದಲ್ಲಿನ ಹಾವಿನ ಹುತ್ತ ಮತ್ತು ನಾಗರಮೂರ್ತಿಗೆ ಹಾಲೆರೆದು ಭಕ್ತಿಯಿಂದ ಪೂಜಿಸಿದರು.

# ಶ್ರೀ ನಲವತ್ವಾಡದ ವೀರೇಶ್ವರ ಶರಣರ ಪುರಾಣ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಆ.21ರಿಂದ ಸ.14ರವರೆಗೆ ಕವಿರತ್ನ ಚನ್ನಕವಿ ವಿರಚಿತ 'ಶ್ರೀ ನಲವತ್ವಾಡದ ವೀರೇಶ್ವರ ಶರಣರ ಪುರಾಣ' ನಡೆಯಲಿದೆ ಎಂದು ಪುರಾಣ ಸಮಿತಿಯ ಅಧ್ಯಕ್ಷ ಕುಮಾರ ಬನ್ನಿಕೊಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಪಂ. ವಿರೂಪಾಕ್ಷಶಾಸ್ತ್ರಿಗಳು ಪುರಾಣ ಪ್ರವಚನವನ್ನು ನಡೆಸಿಕೊಡಲಿದ್ದಾರೆ. ಪ್ರತಿದಿನ ಸಂಜೆ 7.30ರಿಂದ 9ಗಂಟೆಯವರೆಗೆ ಪುರಾಣ ನಡೆಯಲಿದೆ. ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಡಾ.ಅನ್ನದಾನೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಚನ್ನವೀರ ಸ್ವಾಮೀಜಿ ನೇತೃತ್ವ ವಹಿಸಿಕೊಳ್ಳಲಿದ್ದಾರೆ. ತಹಸೀಲ್ದಾರ್ ಧನಂಜಯ್ ಎಂ ಭಾಗವಹಿಸುವರು ಎಂದರು. ಅನ್ನದಾನೀಶ್ವರ ವಿದ್ಯಾ ಸಮಿತಿ ಆಡಳಿತಾಧಿಕಾರಿ ಡಾ.ಬಿ.ಜಿ ಜವಳಿ ಮಾತನಾಡಿ, ಈ ಸಂದರ್ಭದಲ್ಲಿ ಅನಿಲ್ ಅಂಗಡಿ ಅವರಿಗೆ ಗುರುರಕ್ಷೆ ನಡೆಯುವುದು. ವೀರಯ್ಯ ಕಾಗನೂರಮಠ, ಬಸವಂತಪ್ಪ ಹೊಸಮನಿ, ಡಾ. ಎಸ್.ಬಿ ಹಿರೇಮಠ ಪ್ರಸಾದ ಸೇವೆ ವಹಿಸಿಕೊಳ್ಳಲಿದ್ದಾರೆ. ಸೋಮನಾಥ ಗವಾಯಿಗಳು ಸಂಗೀತ ಸೇವೆ ನಡೆಸುವರು. ನಾಗಭೂಷಣ ಹಿರೇಮಠ ತಬಲಾ ಸಾಥ್ ನೀಡಲಿದ್ದಾರೆ ಎಂದು ತಿಳಿಸಿದರು.

ತಿಂಗಳ ಪರ್ಯಂತ ನಡೆಯುವಂತ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಪ್ರತಿದಿನ ಒಂದೊಂದು ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಗದ್ಗುರು ಪುರಾಣ ಸಮಿತಿ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ, ಎಂ.ಎಸ್ ಶಿವಶೆಟ್ಟರ, ದೇವಪ್ಪ ರಾಮೇನಹಳ್ಳಿ, ಅಶೋಕ ಅಂಗಡಿ, ಮಂಜುನಾಥ ಮುಧೋಳ, ವೀರೇಶ ಸಜ್ಜನರ ಪ್ರಶಾಂತ ಗುಡ್ಡದಪ್ಪನವರ ಮುಂತಾದವರಿದ್ದರು.

# ಸೊರಟೂರಲ್ಲಿ ಸಂಭ್ರಮದ ನಾಗರಪಂಚಮಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿ ದೇವಸ್ಥಾನ ಸೇರಿದಂತೆ ನಾಗಪ್ಪನ ಮೂರ್ತಿಗಳಿಗೆ ಗೃಹಣಿಯರು, ಯುವತಿಯರು, ಬಾಲೆಯರು ನಾಗಪ್ಪನ ಮೂರ್ತಿಗೆ ಕುಟುಂಬ ಸದಸ್ಯರೆಲ್ಲರೂ ಸೇರಿ ದೇವರ ಹಾಗೂ ಹಿರಿಯರ ಹೆಸರಿನಲ್ಲಿ ಹಾಲೆರೆದು ಇಷ್ಟಾರ್ಥ ಈಡೇರಿಸುವಂತೆ ಪ್ರಾರ್ಥಿಸಿದರು.

ನಾಗಪ್ಪನಿಗೆ ಅಳ್ಳಿಟ್ಟು ಉಚಿಡಿ, ಕಡಲೆ ಉಸಳಿ, ಶೇಂಗಾ ವಿವಿಧ ಉಂಡೆಗಳನ್ನು ಮಾಡಿ ನಾಗಪ್ಪನಿಗೆ ನೈವೈದ್ಯ ಸಮರ್ಪಿಸಿ, ಹಾಲೆರೆದ ನಂತರ ಕೊಬ್ಬರಿ ಬಟ್ಟಲಿನಿಂದ ಬೋಲ ಬುಗುರಿ ಮಾಡಿ ಜೋಕಾಲಿ ಜೀಕಿ ಸಂಭ್ರಮಿಸಿದರು. ಮಂಜುಳಾ ರಣತೂರ, ನಿರ್ಮಲಾ ಘೋಡಖೆ, ಶಿಲ್ಪಾ ರಣತೂರ, ಸರಸ್ವತಿ ಘೋಡಖೆ, ನೀಲವ್ವ ರಣತೂರ, ಪವನಕುಮಾರ ರಣತೂರ, ಭಾಗಮ್ಮಾ ಕಲಾಲ, ಭವಾನಿ ರಣತೂರ, ಮಮತಾಜಬಿ ಅತ್ತಿಕಟ್ಟಿ, ಲಕ್ಷ್ಮಿ ರಣತೂರ, ಉಮಾ ರಣತೂರ ಇದ್ದರು.




## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

## ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿ ಅಂಗವಾಗಿ ನಾಳೆ ಪೂರ್ವಭಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಆಗಸ್ಟ್ 31 ರಂದು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಿಸುವ ಸಂಬಂಧ ಆ. 23 ರಂದು ಬೆಳಿಗ್ಗೆ 11 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಡಳಿತ ಭವನದ ಸಭಾಭವನದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಸಮಾಜದ ಮುಖಂಡರು ಈ ಸಭೆಗೆ ಹಾಜರಾಗಿ ತಮ್ಮ ಸಲಹೆ/ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಇತ್ತೀಚೆಗೆ ಮುಂಬೈನಲ್ಲಿ ನಡೆದ ನ್ಯಾಷನಲ್ ಲೆಜಿಸ್ಲೇಟರ್ ಕಾನ್ಫರೆನ್ಸ್ ಭಾರತ್(ಇಂಡಿಯಾ) ಇದರ ಪ್ರಗತಿ ಪತ್ರವನ್ನು ರಾಜಸ್ಥಾನದ ಉದಯ್‌ಪುರದಲ್ಲಿ ನಡೆದ ರಾಷ್ಟ್ರಮಟ್ಟದ 9ನೇ ಕಾಮನ್ವೆಲ್ತ್ ಸಂಸ್ಥೆಯ ಸಂಘದ ಭಾರತ್ ವಲಯದ ಸಮ್ಮೇಳನದಲ್ಲಿ ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿಯವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ ಖಾದರ್, ವಿ ಪ ಉಪ ಸಭಾಪತಿ ಎಂ.ಕೆ ಪ್ರಾಣೇಶ್, ಅಧಿಕಾರಿ ವೃಂದದ ಪರವಾಗಿ ಕರ್ನಾಟಕ ವಿ ಪ ಕಾರ್ಯದರ್ಶಿ ಕೆ.ಆರ್ ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ ಮುಂತಾದವರು ಉಪಸ್ಥಿತರಿದ್ದರು.



ರಾಜಸ್ಥಾನದ ಉದಯಪುರದಲ್ಲಿ ಬುಧವಾರದವರೆಗೆ ನಡೆಯುವ ರಾಷ್ಟ್ರೀಯ ಸಭಾಪತಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದ ಪ್ರತಿನಿಧಿಗಳಾಗಿ ಕರ್ನಾಟಕ ವಿ ಪ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರು ರಾಜಸ್ಥಾನದ ಉದಯಪುರ ತಲುಪಿದ ಸಂದರ್ಭದಲ್ಲಿ ರಾಜಸ್ಥಾನ ಸರ್ಕಾರದ ಪರವಾಗಿ ಗೌರವ ವಂದನೆ ಸ್ವೀಕರಿಸಿದರು. ಈ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ ಖಾದರ್, ಉಪ ಸಭಾಪತಿಗಳಾದ ಎಂ.ಕೆ ಪ್ರಾಣೇಶ್, ವಿ ಪ ಕಾರ್ಯದರ್ಶಿ ಕೆ.ಆರ್ ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ ಮುಂತಾದವರು ಉಪಸ್ಥಿತರಿದ್ದರು.

## ಶರಣರ ವಚನ ಚಿಂತನೆಯಿಂದ ಬದುಕು ಸಾರ್ಥಕ

■ ವಿಜಯಸಾಕ್ಷಿ ಸುದ್ದಿ, ಗದಗ

12ನೇ ಶತಮಾನದಲ್ಲಿ ಬಸವಾದಿ ಶಿವಶರಣರು ತಮ್ಮ ಅನುಭವದ ಮೂಲಕ ವಚನಗಳನ್ನು ಬರೆದರು. ಅದರೆ, ಶರಣರು ಬರೆದ ವಚನದಂತೆ ತಮ್ಮ ಬದುಕಿನ ಉದ್ದಗಲಕ್ಕೂ ನಡೆದು ಬಾಳಿ ಬದುಕಿ, ಈ ಸಮಾಜಕ್ಕೆ ವಚನ ಸಾಹಿತ್ಯ ಎಂಬ ದಿವ್ಯವಾದ ಸಂದೇಶವನ್ನು ನೀಡಿದರು. ನಿತ್ಯ ಬದುಕಿನಲ್ಲಿ ಬಸವಾದಿ ಶರಣರ ವಚನ ಚಿಂತನ-ಮಂಥನದಲ್ಲಿ ನಡೆದರೆ ಈ ಬದುಕು ಸಾರ್ಥಕವಾಗುತ್ತದೆ. ಬಸವದಳವು ಪುಸ್ತಕದಲ್ಲಿ ಇರುವ ಜ್ಞಾನವನ್ನು ಮಸ್ತಕಕ್ಕೆ ಹಾಕುತ್ತಿರುವುದು ಅಭಿನಂದನೀಯ ಎಂದು ಹಿರಿಯರಾದ ಶರಣ ವಿ.ಕೆ ಕರಿಗೌಡ್ರು ಅಭಿಪ್ರಾಯಪಟ್ಟರು.

ಅವರು ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ನಡೆದ 1555ನೇ ಶರಣ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ರೇಣುಕಾ ಕರಿಗೌಡ್ರು ಮತ್ತು ಮಂಗಳಕ್ಕ ಕಾಮಣ್ಣವರ ಉಪನ್ಯಾಸ ನೀಡಿದರು. ಶಿವಣ್ಣ ಮುಗದ, ಗೌರಕ್ಕ ಬಡಿಗಣ್ಣವರ, ಎಸ್.ಎನ್ ಹಕಾರಿ ವಚನ ಚಿಂತನೆಯ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಎಸ್.ಎನ್ ಹಕಾರಿ, ಎಸ್.ಎ ಮುಗದ, ಕೆ.ವಿ ಗೋಣಿ, ಎಸ್.ಜಿ ಹಂಚಿನಾಳ, ರೂಪಾ ಓಹಿನಳ್ಳಿ, ಮಂಗಳಕ್ಕ ನಾಲ್ವಾಡ, ಲಕ್ಷ್ಮೀ ಬಡಿಗಣ್ಣವರ, ಗಿರಿಜಾ ಹಿರೇಮಠ, ಎಚ್.ಟಿ ಸುರೇಶ್, ವಿಶ್ವನಾಥ ಕಾಡಪ್ಪನವರ, ಈರಣ್ಣ ಬಡಿಗಣ್ಣವರ, ಗಣೇಶ ಬಡಿಗಣ್ಣವರ, ಅನಸೂಯಾ ಜೀನಗಾ, ಎಂ.ಆರ್ ಜೀನಗಾ, ಶಿವಯೋಗಿ ಜೀನಗಾ, ಸುಶೀಲಾ ಬಡಿಗಣ್ಣವರ, ಭಕ್ತಿ ಅಲತಗಿ, ಸಿ.ಆರ್ ಗಡಾದ ಭಾಗವಹಿಸಿದ್ದರು.

ರೂಪಾ ವಚನ ಪ್ರಾರ್ಥನೆ ಹಾಡಿದರು. ಸಹನಾ ಅಲತಗಿ ಸ್ವಾಗತಿಸಿದರು. ಎಂ.ಆರ್ ಜೀನಗಾ ನಿರೂಪಿಸಿದರು.

### ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮಕ್ಕೆ ಸಚಿವ ಡಾ.ಮಹದೇವಪ್ಪ ಚಾಲನೆ

# ಯಾರೂ ಹಸಿವಿನಿಂದ ಬದುಕು ಸಾಗಿಸಬಾರದು

■ ವಿಜಯಸಾಕ್ಷಿ ಸುದ್ದಿ, ಮೈಸೂರು

ದೇಶ ಅಭಿವೃದ್ಧಿ ಹೊಂದಲು ಪ್ರತಿಯೊಬ್ಬರೂ ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು. ಈ ಉದ್ದೇಶದಿಂದ ಸರ್ಕಾರವು ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುತ್ತಿದೆ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ತಿಳಿಸಿದರು.



ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಹತ್ತನೇ ತರಗತಿಯ ಮಕ್ಕಳಿಗೆ ವಾರಕ್ಕೆರಡು ಮೊಟ್ಟೆ ವಿತರಿಸುವ ಕಾರ್ಯಕ್ರಮಕ್ಕೆ ಸೋಮವಾರ ಮಹಾರಾಜ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿ ತಿನ್ನಿಸುವ ಮೂಲಕ ಚಾಲನೆ ನೀಡಿ ಸಚಿವರು ಮಾತನಾಡಿದರು.

ಬಾಲ್ಯದಲ್ಲಿ ನಮಗೆ ಮೂರು ಹೊತ್ತು ಊಟ ಸಿಗುತ್ತಿರಲಿಲ್ಲ. ಬಡತನದ ದಿನಗಳಲ್ಲಿ ಮುದ್ದೆ ಜೊತೆಗೆ ಉಪ್ಪು ಮತ್ತು ಮೆಣಸಿನಕಾಯಿ ಸೇರಿಸಿ ಊಟ ಮಾಡುತ್ತಿದ್ದೆವು. ಆದರೆ ಪ್ರಸ್ತುತ ಯಾರೂ ಕೂಡ ಹಸಿವಿನಿಂದ ಬದುಕು ಸಾಗಿಸಬಾರದು. ಹಸಿವುಮುಕ್ತ ಸಮಾಜ ನಿರ್ಮಾಣ ಮಾಡಬೇಕು ಎಂಬ ಉದ್ದೇಶದಿಂದ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಮಾಡಿದೆ ಎಂದು ಹೇಳಿದರು.

ಕಳೆದ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 8ನೇ ತರಗತಿ ಮಕ್ಕಳಿಗೆ ಮಾತ್ರ ವಾರ್ಷಿಕವಾಗಿ 46 ದಿನಗಳಿಗೆ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು ಅಥವಾ ಶೇಂಗಾಚಿಕ್ಕಿಯನ್ನು ವಿತರಿಸಲಾಗಿರುತ್ತಿತ್ತು. ಆದರೆ ನಮ್ಮ ಸರ್ಕಾರವು 1 ರಿಂದ 10ನೇ ತರಗತಿ ಮಕ್ಕಳಲ್ಲಿ ಅಪೌಷ್ಠಿಕತೆ ನಿವಾರಣೆಗಾಗಿ ಪ್ರಸಕ್ತ ಸಾಲಿನಲ್ಲಿ ವಾರ್ಷಿಕವಾಗಿ 80 ದಿನಗಳಿಗೆ ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 2,228 ಶಾಲೆಗಳಿದ್ದು, ಅದರಲ್ಲಿ ಸರ್ಕಾರಿ ಶಾಲೆಗಳು 2,064 ಅನುದಾನಿತ 258 ಶಾಲೆಗಳು ಹಾಗೂ ಮೌಲಾನಾ ಅಜಾದ್ ಮಾದರಿ 6 ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳು ಈ ಯೋಜನೆಗೆ ಒಳಪಟ್ಟಿರುತ್ತಾರೆ. ಒಟ್ಟು 2,12,646 ವಿದ್ಯಾರ್ಥಿಗಳಲ್ಲಿ ಸರ್ಕಾರಿ ಶಾಲಾ 1,65,794 ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳು 46,852 ವಿದ್ಯಾರ್ಥಿಗಳಿಗೆ ವಾರಕ್ಕೆ ಎರಡು ದಿನದಂತೆ ಪೂರಕ ಪೌಷ್ಠಿಕ ಆಹಾರ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಯೋಜನೆಯಡಿ ಪ್ರತಿ ವಿದ್ಯಾರ್ಥಿಗೆ ಘಟಕ ವೆಚ್ಚ 6 ರೈ.ಗಳಂತೆ ವಾರ್ಷಿಕ 80 ದಿನಗಳಿಗೆ ಪ್ರತಿಯೊಬ್ಬರಿಗೆ ತಲಾ 480 ರೂ. ಆಗಲಿದ್ದು, ಒಟ್ಟು ಎಲ್ಲಾ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 10,20,70,080 ರೂ.ಗಳನ್ನು ರಾಜ್ಯ ಸರ್ಕಾರವು ನೀಡುತ್ತಿದೆ ಎಂದು ಹೇಳಿದರು.

ವೈಜ್ಞಾನಿಕ ಮತ್ತು ವೈಚಾರಿಕತೆಯಿಂದ ಕೂಡಿದ ಶಿಕ್ಷಣ ಜಾರಿಗೆ ಬರಬೇಕೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದರು. ಅದರಂತೆ ನಮ್ಮ ವಿದ್ಯಾರ್ಥಿಗಳು ಹಾಗೂ ಯುವ ಸಮೂಹ ಯಾವುದೇ ಧರ್ಮ, ಜಾತಿ, ಮತದ ಗೊಂದಲಕ್ಕೆ ಒಳಗಾಗಿದೆ ಸಂವಿಧಾನದ ಆಶಯಗಳಿಗೆ ತಕ್ಕಂತೆ ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳಿಗೆ ಓದಿನ ಜೊತೆ-ಗೆ ಬದುಕು ಕಟ್ಟಿಕೊಳ್ಳುವಂತ ಕೌಶಲ್ಯವನ್ನು ತಿಳಿಸಿಕೊಡಬೇಕು. ಎಲ್ಲಾ ವಿದ್ಯಾರ್ಥಿಗಳು ಭಾರತದ ಉತ್ತಮ ಪ್ರಜೆಗಳಾಗಿ ಸಂವಿಧಾನದ ಆಶಯಕ್ಕೆ ಹಾಗೂ ಸ್ವಾತಂತ್ರ್ಯದ ಉದ್ದೇಶಗಳಿಗೆ ಅನುಗುಣವಾಗಿ ನಿಮ್ಮ ಬದುಕನ್ನು ನೀವೇ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ಜಿಲ್ಲಾ ಮಟ್ಟದ ಬೃಹತ್ ಚಿಂತನಾ ಸಮಾವೇಶದ ಕರಪತ್ರ ಬಿಡುಗಡೆ

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸೆಪ್ಟಂಬರ್ 3ರಂದು ಗದುಗಿನ ಪಂ.ಭೀಮಸೇನ್ ಜೋಶಿ ರಂಗಮಂದಿರದಲ್ಲಿ ಛಲವಾದಿ ಮಹಾಸಭಾ ಗದಗ ಜಿಲ್ಲಾ ಘಟಕದಿಂದ ನಡೆಯಲಿರುವ ಸಮುದಾಯದ ಚಿಂತನಾ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಕರಪತ್ರ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸಮುದಾಯದ ಹಿರಿಯ ಮುಖಂಡ ಬಸವರಾಜ ಕಡೇಮನಿ ಮಾತನಾಡಿ, ಜಿಲ್ಲಾ ಚಿಂತನಾ ಸಮಾವೇಶವನ್ನು ಎಲ್ಲರ ಸಹಕಾರದೊಂದಿಗೆ ಯಶಸ್ವಿಗೊಳಿಸಬೇಕು. ಛಲವಾದಿ ಸಮುದಾಯದ ಇತಿಹಾಸ ಇರುವ ಈ ಕರಪತ್ರ ಪ್ರತಿ ಮನೆಗೂ ಮುಟ್ಟುವಂತೆ ಆಗಲಿ. ಸಮುದಾಯದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶಕ್ಕೆ ಬರುವಂತಾಗಲಿ ಎಂದರು.

ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಆನಂದ ಸಿಂಗಾಡಿ, ಹಿರಿಯರಾದ ಚಂದ್ರಶೇಖರ ಕಾಳಿ, ಆರ್.ಎಲ್ ಬಾದಾಮಿ, ವಸಂತ ಕಲಕಂಬಿ, ವಾಸಂತಿ ಮಲ್ಲಾಪುರ, ಸುಭಾಷ ಸೋಂಪುರ, ಮಲ್ಲೇಶ ಹೊಸಮನಿ, ರಮೇಶ ಕಡಿಯವರ, ಜಿಲ್ಲೆಯ ಎಲ್ಲ ತಾಲೂಕಿನ ಅಧ್ಯಕ್ಷರು, ಸಮುದಾಯದ ಯುವಕರು ಉಪಸ್ಥಿತರಿದ್ದರು.



## ಗ್ರಾಮದೇವಿಗೆ ಉಡಿ ತುಂಬುವ ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲ ಪಟ್ಟಣ ಹಾಗೂ ಗ್ರಾಮಗಳ ಗ್ರಾಮದೇವಿ ಶ್ರೀ ದ್ಯಾಮವ್ವ ದೇವಿಗೆ ಕರೆ ಕಟಂಬಲಿ ಅಂಗವಾಗಿ ಮಂಗಳವಾರ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ.

ಪುರಾತನವಾದ ನರೇಗಲ್ಲ ಪಟ್ಟಣದ ಗ್ರಾಮದೇವಿ ಶ್ರೀ ದ್ಯಾಮವ್ವ ದೇವಿಗೆ ಐದು ವಾರಗಳ ವಾರ ಮಾಡಿ, ಐದನೇ ವಾರ ಸಮಸ್ತ ಭಕ್ತರು ಉಡಿ ತುಂಬುವುದು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಹೀಗೆ ಮಾಡುವುದರಿಂದ ಮಳೆ, ಬೆಳೆ



ಸಮೃದ್ಧಿಯಾಗಿ ಜನ, ಜಾನುವಾರು ಶಾಂತಿ, ನೆಮ್ಮದಿಯಿಂದ ಇರುವರು ಎಂಬ ನಂಬಿಕೆಯಿದೆ. ಗ್ರಾಮದೇವಿ ದ್ಯಾಮವ್ವ ದೇವಿಯ ತವರು ಗ್ರಾಮವಾದ ತೋಟಗಂಟಿ ಗ್ರಾಮದ ದೈವದವರು ಸಂಜೆ ನರೇಗಲ್ಲ ಪಟ್ಟಣಕ್ಕೆ ವಾದ್ಯ ವೇಳಗಳೊಂದಿಗೆ ಮರೆವಣಿಗೆ ಮೂಲಕ ಆಗಮಿಸಿ ಉಡಿ ತುಂಬುವರು.

ತೋಟಗಂಟಿ ದೈವದವರು ಉಡಿ ತುಂಬಿದ ನಂತರವೇ ನರೇಗಲ್ಲ ಹಾಗೂ ಮಜರೆ ಗ್ರಾಮಗಳವರು ಉಡಿ ತುಂಬುವುದು ಸಂಪ್ರದಾಯ. ಕಾರ್ಯಕ್ರಮದಲ್ಲಿ ಸರ್ವ ಭಕ್ತರು ಪಾಲ್ಗೊಂಡು ಪುನೀತರಾಗಬೇಕೆಂದು ಗ್ರಾಮದೇವಿ ಶ್ರೀ ದ್ಯಾಮವ್ವ ದೇವಿ ಸೇವಾ ಸಮೀತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾರ್ವಜನಿಕರಿಗೆ ಮಾಹಿತಿ ಹಕ್ಕು ಕಾಯ್ದೆಯ ಜ್ಞಾನ ಅಗತ್ಯ



■ ವಿಜಯಸಾಕ್ಷಿ ಸುದ್ದಿ, ಗದಗ

ಮಾಹಿತಿ ಹಕ್ಕು ಕಾಯಿದೆ ಸರಕಾರದ ಆಡಳಿತದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಪ್ರಬಲ ಬ್ರಹ್ಮಾಸ್ತ್ರವಾಗಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು. ಒಬ್ಬ ಸಂಸದ ಸರಕಾರದಿಂದ ಪಡೆಯಬಹುದಾದ ಎಲ್ಲಾ ಮಾಹಿತಿಯನ್ನು ಕೂಡ ಒಬ್ಬ ಸಾಮಾನ್ಯ ಪ್ರಜೆ ಈ ಹಕ್ಕಿನಡಿಯಲ್ಲಿ ಪಡೆಯಕೊಳ್ಳಬಹುದು ಎಂದು ಕರ್ನಾಟಕ ಮಾಹಿತಿ ಆಯೋಗದ ವಿಶ್ರಾಂತ ಆಯುಕ್ತ ಗದುಗಿನ ಪ್ರಖ್ಯಾತ ವೈದ್ಯರಾದ ಡಾ. ಶೇಖರ ಸಜ್ಜನ ತಿಳಿಸಿದರು.

ಇಂಥ ಮಾಹಿತಿ ಹಕ್ಕು ಕಾಯಿದೆಯನ್ನು ಕಾನೂನು ಓದುವ ವಿದ್ಯಾರ್ಥಿಗಳು ಒಂದು ವಿಷಯವಾಗಿ ಓದಿ, ಪರೀಕ್ಷೆ ಬರೆದು ವಕೀಲರಾದರೆ ಅದಕ್ಕೆ ಇನ್ನೂ ಹೆಚ್ಚಿನ ಮಹತ್ವ ಬರಲಿದೆ. ಮಾಹಿತಿ ಹಕ್ಕು ಕಾಯಿದೆಯ ಪಕ್ಷಿ ನೋಟ ಹಾಗೂ ಪ್ರಮುಖ ಕಲಂಗಳ ಬಗ್ಗೆ ವಿವರವಾಗಿ ತಿಳಿಸಿದರು.

ಎಸ್.ಎ ಮಾನ್ವಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಆರ್ ಪಾಟೀಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕ ಮೂರಶಿಳ್ಳಿನ ಅತಿಥಿಗಳನ್ನು ಪರಿಚಯಿಸಿದರು. ಡಾ. ವಿಜಯ ಮೇರವಾಡೆ ವಂದಿಸಿದರು.

## ರೈತ ಶಕ್ತಿಯನ್ನು ಅನಾವರಣಗೊಳಿಸುವ 'ಕ್ಷೇತ್ರಪತಿ'

■ ವಿಜಯಸಾಕ್ಷಿ ಸುದ್ದಿ, ಗದಗ

ಉತ್ತರ ಕರ್ನಾಟಕ ಭಾಗದ ರೈತರ ಬದುಕಿನ ನೈಜ ಘಟನೆ ಆಧಾರಿತ 'ಕ್ಷೇತ್ರಪತಿ' ಚಲನಚಿತ್ರವನ್ನು ವಿಶೇಷವಾಗಿ ರೈತರು ಮತ್ತು ರೈತ ಮಕ್ಕಳು ನೋಡಬೇಕು ಎಂದು ಕಳಸಾ-ಬಂಡೂರಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ವಸಂತ ಪಡಗದ ಅಭಿಪ್ರಾಯಪಟ್ಟರು.

ಬಹಳ ದಿನಗಳ ಬಳಿಕ ಕನ್ನಡ ಚಿತ್ರರಂಗಕ್ಕೆ ಉತ್ತರ ಕರ್ನಾಟಕ ಭಾಗದ ಕಥೆಯೊಂದು ಸಿನಿಮಾ ಆಗಿ, ಪ್ರದರ್ಶನ ಕಾಣುತ್ತಿದೆ. ಉತ್ತರ ಕರ್ನಾಟಕ ಭಾಗದ ರೈತರ ಮಕ್ಕಳಿಂದ ನಿರ್ಮಾಣಗೊಂಡ ಕ್ಷೇತ್ರಪತಿ ಚಲನಚಿತ್ರವು ಅನ್ನದಾತನ ಸಮಸ್ಯೆಗಳು, ಹೋರಾಟದ ಬದುಕು



ಸೇರಿದಂತೆ ವಿಶೇಷವಾಗಿ ಆತ್ಮಹತ್ಯೆ ಮಾಡಿಕೊಂಡ ರೈತನ ಮಗನಾಗಿ ಸರ್ಕಾರದ ವಿರುದ್ಧ ರೊಚ್ಚಿಗೇಳುವ ಯುವಕನ ಪಾತ್ರದಲ್ಲಿ ನವೀನ್ ಶಂಕರ್ ಕಾಣಿಸಿಕೊಂಡು ರೈತ ಶಕ್ತಿಯನ್ನು ಅನಾವರಣಗೊಳಿಸಿದ್ದಾರೆ ಎಂದು ಕಳಸಾ-ಬಂಡೂರಿ ಹೋರಾಟ ಸಮಿತಿ ಅಧ್ಯಕ್ಷ ವಿಜಯ ಕುಲಕರ್ಣಿ ಹೆಮ್ಮೆ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ಆನಂದ ಗವಳಿ, ಪ್ರಭು ಕರಮುಡಿ, ವಿಶಾಲ ಮುಂಡರಗಿ, ಷಣ್ಮುಖ ಹರಿಜನ, ಮಂಜು ಪೂಜಾರಿ ಮುಂತಾದವರಿದ್ದರು.

### ಡಾ.ಧನೇಶ ದೇಸಾಯಿಯವರ 'ಮುಳ್ಳು ಮೊನೆಯ ಮಂಜು' ಪುಸ್ತಕ ಲೋಕಾರ್ಪಣೆ

# 'ಸಾಹಿತ್ಯ' ಸಮಾಜದ ಸ್ವಾಸ್ಥ್ಯದ ಸಂಕೇತ

■ ವಿಜಯಸಾಕ್ಷಿ ಸುದ್ದಿ, ಗದಗ

ಅಕ್ಷರ ಲೋಕಕ್ಕೆ ಸಂಬಂಧವೇ ಇಲ್ಲದ ವೃತ್ತಿಗಳಲ್ಲಿ ತೊಡಗಿಕೊಂಡವರು ತಮ್ಮ ಜೀವನಾನುಭವಗಳನ್ನೇ ಬರಹದ ರೂಪಕ್ಕೆ ಇಳಿಸಿದಾಗ ಸಾಹಿತ್ಯ ಇನ್ನೂ ಶ್ರೀಮಂತವಾಗುತ್ತದೆ. ಇದಕ್ಕೆ ಡಾ.ಧನೇಶ ದೇಸಾಯಿಯವರ 'ಮುಳ್ಳು ಮೊನೆಯ ಮಂಜು' ಕವನ ಸಂಕಲನ ನಿದರ್ಶನವಾಗಿದೆ ಎಂದು ಖ್ಯಾತ ಸಾಹಿತಿ ಡಾ.ರಾಜಶೇಖರ ಮಠಪತಿ ನುಡಿದರು.



ರವಿವಾರ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಆಶ್ರಯದಲ್ಲಿ ನಗರದ ಪೊಲೀಸ್ ಭವನದಲ್ಲಿ ಜರುಗಿದ 'ಮುಳ್ಳು ಮೊನೆಯ ಮಂಜು' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ಪಂದನಾ ಮನೋಭಾವವಿರುವ ಯಾರು ಬೇಕಾದರೂ ಕಾವ್ಯ ಸೃಷ್ಟಿಸಬಲ್ಲರು ಎಂಬುದಕ್ಕೆ ಈ ಸಮಾರಂಭ ಸಾಕ್ಷಿಯಾಗಿದ್ದು, ಡಾ.ಧನೇಶ ದೇಸಾಯಿಯವರ ಕವಿತೆಗಳನ್ನು ಓದುತ್ತಿದ್ದರೆ ಈ ನಾಡು ಕಂಡ ಶ್ರೇಷ್ಠ ವೈದ್ಯಸಾಹಿತಿಗಳ ಸಾಲಿನಲ್ಲಿ ನಿಲ್ಲುವರೆಂಬ ಖಚಿತತೆ ಮೂಡುತ್ತಿದೆ ಎಂದರು.

ಲೇಖಕ ಡಾ.ಧನೇಶ ದೇಸಾಯಿ ಮಾತನಾಡಿ, ಬಾಲ್ಯದಿಂದಲೇ ಪೋಷಿಸಿಕೊಂಡು ಬಂದಿರುವ ಕವಿಹೃದಯ ಅನಾವರಣವಾಗುವ ಕಾಲ ಇದಾಗಿದ್ದು, ವೈದ್ಯಕೀಯ ವಿದ್ಯಾಭ್ಯಾಸದ ಸಮಯದಲ್ಲೂ ನನ್ನ ಆಸಕ್ತಿಗಳ ಕಡೆ ಗಮನಹರಿಸಲು ಸಾಧ್ಯವಾಗಿರಲಿಲ್ಲ. ವೈದ್ಯನಾದ ಬಳಿಕ ನನ್ನ ತಂದೆ-ತಾಯಿಗಳ ಆಣತಿಯಂತೆ ಗದುಗಿನ ಜನರ ಸೇವೆ ಮಾಡಲು ಅಣಿಯಾಗಿ, ಈ ಭಾಗದ ವೈದ್ಯಕೀಯ ಕ್ಷೇತ್ರದಲ್ಲಿ ರೋಗಿಗಳ ಒಳಿತಿಗಾಗಿ ಹಲವು ಪ್ರಥಮಗಳನ್ನು ಜಾರಿಗೆ ತಂದ ತೃಪ್ತಿ ನನಗಿದೆ. ಮಿತ್ರರ ಪ್ರೋತ್ಸಾಹದಿಂದ ಕೃತಿ ರಚನೆ ಮಾಡಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಬಯಕೆ ಇದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಮುಳ್ಳಿನ ಮೊನೆ ಯಾವಾಗಲೂ ನಂಜಾಗಿರುತ್ತದೆ. ಆದರೆ ಕವಿಯ ಕೈಯಲ್ಲಿ ಅದು ಮಂಜಾಗಿದ್ದು, ವೈದ್ಯರು ರೋಗಿಯ ರೋಗಗಳಿಗೆ ಚಿಕಿತ್ಸೆಯ ಮೂಲಕ ಪರಿಹಾರ ನೀಡಿದಂತೆ ಕವಿ ಸಮಾಜದ ಎಡರು-ತೊಡರುಗಳಿಗೆ ತನ್ನ ಅಕ್ಷರಗಳ ಮೂಲಕ ಪರಿಹಾರ ಸೂಚಿಸಬೇಕು ಎಂದರು.

> ಸಾಹಿತ್ಯ ಸಮಾಜದ ಸ್ವಾಸ್ಥ್ಯದ ಸಂಕೇತವಾಗಿದ್ದು, ಇದು ಕಾಲಾತೀತ-ಸೀಮಾತೀತವಾಗಿದೆ. ಕಾವ್ಯ ರಚನೆಗೆ ಸಾಮಾನ್ಯ ಸಂಗತಿಗಳೇ ಸಾಕು ಎಂಬುದನ್ನು ವರಕವಿ ಬೇಂದ್ರೆಯವರು ನಿರೂಪಿಸಿದ್ದು, ಮಕ್ಕಳ ವೈದ್ಯರಾಗಿರುವ ಡಾ.ಧನೇಶರಿಗೆ ಕಾವ್ಯ ರಚನೆಗೆ ಬೇಕಾದ ಮುಗ್ಧತೆ-ಸಂವೇದನಾಶೀಲತೆ ಸಹಜವಾಗಿಯೇ ಒಲಿದಿವೆ. ಸಾಹಿತ್ಯ ಓದುವಾಗ ಲೇಖಕನ ಸ್ಥಳ-ಕಾಲ-ಧರ್ಮಗಳು ಮರೆಯಾಗಿ ಭಾವತನ್ಮಯತೆ ಮೂಡಬೇಕು, ಇಂಥ ಆಪ್ತತೆ ಶ್ರೀಯುತರ ಕವಿತೆಗಳಲ್ಲಿದ್ದು, ಬದುಕನ್ನು ನೋಡುವ ಹೊಸ ದೃಷ್ಟಿಕೋನವನ್ನು ಡಾ.ಧನೇಶರವರು ಅವರ ಪ್ರಥಮ ಸಂಕಲನದ ಮೂಲಕ ತೆರೆದಿಟ್ಟಿದ್ದಾರೆ ಎಂದರು.
>
> – ಡಾ.ರಾಜಶೇಖರ ಮಠಪತಿ, ಸಾಹಿತಿಗಳು.

ಹಿರಿಯ ವೈದ್ಯ ಡಾ. ಎಸ್.ಬಿ ಶೆಟ್ಟರ್ ಮಾತನಾಡಿದರು. ತೋಂಟದಾರ್ಯ ಮಠದ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಪ್ರಸಾದ ಸುತಾರ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಡಾ.ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಶಿವಾನಂದ ಗಿಡ್ನಂದಿ ಸ್ವಾಗತಿಸಿದರೆ ಕಿಶೋರಬಾಬು ನಾಗರಕಟ್ಟಿ ವಂದಿಸಿದರು. ಪೊಲೀಸ್ ಉಪ ಅಧೀಕ್ಷಕ ಮಡಿವಾಳಪ್ಪ ಸಂಕದ, ಚಲನಚಿತ್ರಗಳ ಓಟಿಟಿ ಸಲಹೆಗಾರರಾದ ಅನ್ನೆ ಮಿನೆರ್ವಾ ವೇದಿಕೆ ಮೇಲಿದ್ದರು. ಕಾರ್ಯಕ್ರಮದ ಸಂಯೋಜನೆಯನ್ನು ಎಂಟ್ಯೆಸಿಂಗ್ ಬೆಂಗಳೂರಿನ ಭೀಮರಾವ್ ಕುಲಕರ್ಣಿ ವಹಿಸಿದ್ದರು.

## ಛತ್ತೀಸ್‌ಗಢಕ್ಕೆ ಕಾಲಿಟ್ಟ ಕೇಜ್ರಿವಾಲ್: ಭರಪೂರ ಚುನಾವಣಾ ಭರವಸೆ



■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಕೇವಲ ಮೂರು ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಆಡಳಿತದ ಛತ್ತೀಸ್‌ಗಢದಲ್ಲಿ ಆಮ್ ಆದ್ಮಿ ಪಕ್ಷದ(ಎಎಪಿ) ಹೆಜ್ಜೆಗುರುತನ್ನು ವಿಸ್ತರಿಸಲು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ 9 ಚುನಾವಣಾ ಭರವಸೆಗಳನ್ನು ಘೋಷಿಸಿದ್ದಾರೆ. ಇದರಲ್ಲಿ 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಮತ್ತು ಬಾಕಿ ಇರುವ ವಿದ್ಯುತ್ ಬಿಲ್‌ಗಳನ್ನು ಮನ್ನಾ ಮಾಡುವುದು ಸೇರಿದೆ.

18 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಕಾಲೇಜು ವೆಚ್ಚವಾಗಿ 1 ಸಾವಿರ ರೂ., ಚಿಕಿತ್ಸಾಲಯಗಳಲ್ಲಿ ಉಚಿತ ಚಿಕಿತ್ಸೆ, ನಿರುದ್ಯೋಗಿ ಯುವಕರಿಗೆ ತಿಂಗಳಿಗೆ 3 ಸಾವಿರ ರೂ., ರಾಜ್ಯದಲ್ಲಿ ಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಭರವಸೆಗಳು ಸೇರಿವೆ.

"ಛತ್ತೀಸ್‌ಗಢದಲ್ಲಿ ಸಾಕಷ್ಟು ಭ್ರಷ್ಟಾಚಾರವಿದೆ.

ಆದರೆ, ನಾವು ಭ್ರಷ್ಟರಲ್ಲ. ನಾವು ಎಲ್ಲಾ ರೀತಿಯ ಭ್ರಷ್ಟಾಚಾರವನ್ನು ನಿಗ್ರಹಿಸುತ್ತೇವೆ ಮತ್ತು ಭರವಸೆಗಳನ್ನು ಪೂರೈಸುತ್ತೇವೆ. ಇಡೀ ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ಹತಾಶರಾಗಿದ್ದಾರೆ. ಇದು ರೈತರು ಮತ್ತು ಬುಡಕಟ್ಟು ಜನರಿಗೆ ಪ್ರಮುಖ ಘೋಷಣೆಯಾಗಿದೆ" ಎಂದು ಹೇಳಿದರು. 2018ರ ಚುನಾವಣೆಯಲ್ಲಿ ಛತ್ತೀಸ್‌ಗಢದ ಒಟ್ಟು 90 ವಿಧಾನಸಭಾ ಸ್ಥಾನಗಳಲ್ಲಿ 85ರಿಂದ ಎಎಪಿ ಸ್ಪರ್ಧಿಸಿತ್ತು.

## ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಲು ಮನವಿ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ವರವಿ ಹಾಗೂ ಗುಡ್ಡದಪೂರ ಸೇರಿದಂತೆ ವಿವಿಧ ಗ್ರಾಮೀಣ ಪ್ರದೇಶಗಳ ರೈತರ ಪಂಪಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕೆಂದು ಅಖಿಲ ಕರ್ನಾಟಕ ಡಿ.ಕೆ ಶಿವಕುಮಾರ ಅಭಿಮಾನಿಗಳ ಸಂಘ ಹಾಗೂ ಗ್ರಾಮಸ್ಥರ ವತಿಯಿಂದ ಹೆಸ್ಕಾಂ ಶಾಖಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಮಹಾಂತೇಶ ದಶಮನಿ, ರೈತರು ಜಮೀನುಗಳಿಗೆ ನೀರು ಹಾಯಿಸಲು ಸತತ 7 ಗಂಟೆ ವಿದ್ಯುತ್ ಅವಶ್ಯವಿದ್ದು, ರೈತರಿಗೆ ಹಗಲು 4 ತಾಸು ಕರೆಂಟ್ ನೀಡಲಾಗುತ್ತಿದೆ. ರಾತ್ರಿ 3 ಗಂಟೆ ಅನಿಯಮಿತವಾಗಿ ನೀಡುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ. ರೈತರು ಬೆಳೆಗಳನ್ನು ಉಳಿಸಿಕೊಳ್ಳಲು ಹರಸಾಹಸಪಡುತ್ತಿದ್ದಾರೆ. ಆದ್ದರಿಂದ, ಕೂಡಲೇ ಸಮರ್ಪಕ ವಿದ್ಯುತ್ ಪೂರೈಸಬೇಕು. ಟಿಸಿಗಳು ಹಾಳಾದ ಸಮಯದಲ್ಲಿ ತಕ್ಷಣವೇ ಟಿಸಿಯನ್ನು ಪೂರೈಸಬೇಕು. ಅಧಿಕಾರಿಗಳು ಮಾಡುವ ಬೇಜವಾಬ್ದಾರಿತನದಿಂದ ಸರಕಾರಕ್ಕೆ ಕೆಟ್ಟ ಹೆಸರು ಬರಬಾರದು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ಹೆಸ್ಕಾಂ ಶಾಖಾಧಿಕಾರಿ ಬಡಿಗೇರ, ಈ ಕುರಿತು ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು. ಈಗಿರುವ ಸ್ಟೇಶನ್‌ನಲ್ಲಿ ಅಧಿಕ ಲೋಡ್ ಇದೆ. ಹೆಚ್ಚುವರಿ ಲೋಡ್‌ಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, ಶೀಘ್ರವೇ ಕಾರ್ಯಾರಂಭವಾಗಲಿದೆ. ಇದಾದ ಮೇಲೆ ಇಂತಹ ಸಮಸ್ಯೆಗಳು ಉದ್ಭವಿಸುವದಿಲ್ಲ. ಎಲ್ಲ ರೈತರು ಸಹ ಆರ್‌ಆರ್ ನಂಬರ್ ಪಡೆದುಕೊಳ್ಳಬೇಕೆಂದು ಹೇಳಿದರು. ತಾಲೂಕಾಧ್ಯಕ್ಷ ಬಸವರಾಜ ಕಂಬಳಿ, ಮಾನಪ್ಪ ಗಂಟಿ, ಸಿದ್ದಪ್ಪ ಸ್ವಾಮಿ, ರಮೇಶ ಭೂತರೆಡ್ಡಿ, ಮಾನಪ್ಪ ಮೀಸಿ, ಸಿದ್ರಾಮಪ್ಪ ಮಾಗಡಿ ಮುಂತಾದವರು ಉಪಸ್ಥಿತರಿದ್ದರು.

### ಶ್ರಾವಣ ಸಂಜೆ, ಪುರಾಣ ಪ್ರವಚನ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

## ಆಸೆಗಳಿಗಾಗಿ ಬದುಕಬಾರದು, ಆದರ್ಶಕ್ಕಾಗಿ ಬದುಕಬೇಕು

■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಧರ್ಮ ಮಾರ್ಗದಲ್ಲಿ ನಡೆದರೆ ಧರ್ಮ ನಮ್ಮನ್ನು ಕಾಪಾಡುತ್ತದೆ. ಹಣ ನೋಡಿ ಕೊಡುವ ಬೆಲೆ, ಆಸ್ತಿ ನೋಡಿ ಒಂದಾಗುವ ಬಂಧುಗಳು ಹೆಚ್ಚು ಕಾಲ ನಮ್ಮೊಂದಿಗೆ ಉಳಿಯುವುದಿಲ್ಲ. ಒಳ್ಳೆಯ ವ್ಯಕ್ತಿತ್ವವೇ ಮನುಷ್ಯನ ನಿಜವಾದ ಆಸ್ತಿ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಸೋಮವಾರ ಶ್ರೀ ರಂಭಾಪುರಿ ಪೀಠದಲ್ಲಿ ನಾಗರ ಪಂಚಮಿಯಂದು ನಾಗರಕಟ್ಟೆಗೆ ಹಾಲೆರೆದು ಶ್ರಾವಣ ಸಂಜೆ, ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಂಪ್ರದಾಯ, ಪರಂಪರೆಗಳು ಮಾನವನ ಶ್ರೇಯಸ್ಸಿಗಾಗಿ ಇವೆಯೇ ಹೊರತು ಅವನತಿಗಲ್ಲ. ಪ್ರಾಚೀನ ಆದರ್ಶ ಚಿಂತನಗಳನ್ನು ಮೈಗೂಡಿಸಿಕೊಂಡು ಬಾಳಿದರೆ ಜೀವನದಲ್ಲಿ ಶಾಂತಿ ನೆಲೆಸಲು ಸಾಧ್ಯ. ಬದುಕು ಬದಲಾಯಿಸಬೇಕು ಎಂದುಕೊಂಡಿದ್ದರೆ ಅದಕ್ಕಾಗಿ ಹಣ ಬೇಡ. ಯೋಜನೆ ಬದಲಾದರೆ ಸಾಕು ಎಂದು ತಿಳಿಸಿದರು.





ಪುರಾಣ ಪ್ರವಚನ ಮಾಡಿದ ಮಾದನ ಹಿಪ್ಪರಗಿ ಹಿರೇಮಠದ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ತಮ್ಮ ಪ್ರವಚನದಲ್ಲಿ, ತಿಂದ ಅನ್ನ ಶಾಶ್ವತವಾಗಿ ಯಾರ ಹೊಟ್ಟೆಯಲ್ಲಿಯೂ ಇರುವುದಿಲ್ಲ. ಆದರೆ, ಹಸಿವು ನೀಗಿಸಿದ ಆ ಘಳಿಗೆಯನ್ನು ಅರಿತವರು ಎಂದೂ ಮರೆಯಲಾರರು. ಹಿಂದೆ ಜನರ ಬಟ್ಟೆ ಕೊಳೆಯಾಗಿರುತ್ತಿದ್ದರೂ ಮನಸ್ಸು ಸ್ವಚ್ಛವಾಗಿತ್ತು. ಆದರೆ ಈಗ ಬಟ್ಟೆಗಳು ಸ್ವಚ್ಛವಾಗಿವೆ, ಮನಸ್ಸು ಕೊಳೆಯಾಗಿದೆ. ಆತ್ಮ ಸಾಕ್ಷಿಗೆ ಅನುಗುಣವಾಗಿ ನಾವಿದ್ದರೆ ಯಾರ ಮುಂದೆಯೂ ತಲೆ ತಗ್ಗಿಸುವ ಅವಶ್ಯಕತೆ ಇರುವುದಿಲ್ಲ ಎಂಬುದನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ತಮ್ಮ ಸತ್ಕ್ರಾಂತಿಯ ಮೂಲಕ ಜನ ಸಮುದಾಯವನ್ನು ಉದ್ಧರಿಸಿದ್ದಾರೆ ಎಂದರು.

ರಾಯಚೂರು ಕಿಲ್ಲೆ ಬ್ರಹನ್ಮಠದ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಸತ್ಕಥಾ ಶ್ರವಣ ಮಾಡುವುದೇ ನಿಜವಾದ ಶ್ರಾವಣ. ಒಳ್ಳೆಯದನ್ನು ಕೇಳಿ ಅದೇ ದಾರಿಯಲ್ಲಿ ಮುನ್ನಡೆವ ಪ್ರಯತ್ನ ಮಾಡಬೇಕೆಂದರು.

> ಭಗವಂತನ ಕೈಯಲ್ಲಿ ಎಲ್ಲಾ ಇರುತ್ತದೆ. ಆದರೂ ಸುಮ್ಮನಿರುತ್ತಾನೆ. ಮನುಷ್ಯನ ಕೈಯಲ್ಲಿ ಏನೂ ಇಲ್ಲ. ಆದರೂ ಎಲ್ಲವೂ ಇದೆ ಅನ್ನುವ ಭ್ರಮೆಯಲ್ಲಿರುತ್ತಾನೆ. ಬೆಳಕನ್ನು ಕಾಣಲು ಇಡೀ ರಾತ್ರಿ ಕಾಯಬೇಕು. ಸಂತೋಷವನ್ನು ಕಾಣಲು ಕಷ್ಟಗಳನ್ನು ಎದುರಿಸಲೇಬೇಕಾಗುತ್ತದೆ. ಮನುಷ್ಯ ಆಸೆಗಳಿಗಾಗಿ ಬದುಕಬಾರದು. ಆದರ್ಶಕ್ಕಾಗಿ ಬದುಕಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ದೀರ್ಘವಾದ ಜೀವನವಷ್ಟೇ ಮುಖ್ಯವಲ್ಲ. ದಿವ್ಯವಾದ ಜೀವನ ಮುಖ್ಯ.
>
> **– ಡಾ. ವೀರಸೋಮೇಶ್ವರ ಜಗದ್ಗುರುಗಳು.**
>
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ ಮತ್ತು ಸ್ವಾಗತ ಗೀತೆ ಜರುಗಿ-ತು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು. ಬೆಳಿಗ್ಗೆ ಶ್ರೀ ರಂಭಾಪುರಿ ಜಗದ್ಗುರುಗಳು ಭಕ್ತ ಸಮುದಾಯದ ಸಮ್ಮುಖದಲ್ಲಿ ನಾಗರಕಟ್ಟೆಗೆ ಹಾಲೆರೆದು ಸಾಂಪ್ರದಾಯಕ ಪೂಜೆ ಸಲ್ಲಿಸಿದರು.

## ಮುಂದಿನ ಸಮ್ಮೇಳನವನ್ನು ಕರ್ನಾಟಕದಲ್ಲಿ ಆಯೋಜಿಸುವಂತೆ ಮನವಿ

■ವಿಜಯಸಾಕ್ಷಿ ಸುದ್ದಿ, ಉದಯಪುರ

10ನೇ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ ಸಮ್ಮೇಳನವನ್ನು ಕರ್ನಾಟಕದಲ್ಲಿ ಆಯೋಜಿಸುವಂತೆ ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನಸಭಾಧ್ಯಕ್ಷರಾದ ಯು.ಟಿ ಖಾದರ್ ಅವರು ಅಸೋಸಿಯೇಶನ್‌ನ ಅಧ್ಯಕ್ಷರಾದ ಬ್ರಿಟನ್‌ನ ಇಯಾನ್ ಲಿಡ್ಡೆಲ್ ಗ್ರಾಂಗರ್ ಇವರಿಗೆ ಜಂಟಿಯಾಗಿ ಮನವಿ ಮಾಡಿದರು.



ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ 9ನೇ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ ಸಮಾವೇಶದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಬ್ರಿಟನ್‌ನ ಇಯಾನ್ ಲಿಡ್ಡೆಲ್ ಗ್ರಾಂಗರ್ ಅವರಿಗೆ ಮನವಿ ಸಲ್ಲಿಸಿ ಅವರೊಂದಿಗೆ ಚರ್ಚಿಸುವ ಸಂದರ್ಭದಲ್ಲಿ, ಕರ್ನಾಟಕದ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಐತಿಹಾಸಿಕ ಹಿನ್ನೆಲೆಯ ಕುರಿತು ಸುದೀರ್ಘವಾಗಿ ವಿವರಿಸಿದರು.

10ನೇ ಸಮ್ಮೇಳನವನ್ನು ಕರ್ನಾಟಕದಲ್ಲಿ ಆಯೋಜಿಸಲು ಎಲ್ಲ ರೀತಿಯ ಸಹಾಯ-ಸಹಕಾರ ನೀಡುವುದಾಗಿ ಬಸವರಾಜ ಹೊರಟ್ಟಿ ಹಾಗೂ ಯು.ಟಿ ಖಾದರ್ ಅವರು ಹೇಳಿದರು.

ಮನವಿ ಆಲಿಸಿದ ಇಯಾನ್ ಲಿಡ್ಡೆಲ್ ಗ್ರಾಂಗರ್, ಈ ಕುರಿತು ರಾಷ್ಟ್ರೀಯ ಕಾಮನ್‌ವೆಲ್ತ್ ಅಸೋಸಿಯೇಶನ್ ಅಧ್ಯಕ್ಷರಾದ ಓಂ ಬಿರ್ಲಾರವರ ಉಪಸ್ಥಿತಿಯಲ್ಲಿ ನಡೆಯುವ ಬೋರ್ಡ್ ಮೀಟಿಂಗ್‌ನಲ್ಲಿ ಚರ್ಚಿಸಿ ನಿರ್ಧರಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ತಿನ ಉಪಸಭಾಪತಿ ಎಂ.ಕೆ ಪ್ರಾಣೇಶ, ಅಧಿಕಾರಿ ವೃಂದದ ಪರವಾಗಿ ಪರಿಷತ್ತಿನ ಕಾರ್ಯದರ್ಶಿ ಕೆ.ಆರ್ ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ ಮುಂತಾದವರು ಉಪಸ್ಥಿತರಿದ್ದರು.

## ಕಾವೇರಿ ವಿಚಾರವಾಗಿ ನಿತ್ಯವೂ ಜಗಳ ಸಲ್ಲದು: ಡಿ.ಕೆ ಶಿವಕುಮಾರ್

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ನಾವು ಮತ್ತು ತಮಿಳುನಾಡಿನವರು ಅಣ್ಣ-ತಮ್ಮಂದಿರಂತೆ ಕಾವೇರಿ ವಿಚಾರ ಬಗೆಹರಿಸಿಕೊಳ್ಳಬೇಕು ಎಂದು ಕುಮಾರಸ್ವಾಮಿ ಅವರು ಹಿಂದೆ ಹೇಳಿದ್ದರು. ಅವರ ಮಾತಿನಂತೇ ನಾನು ನಡೆಯುತ್ತಿದ್ದೇನೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದ್ದಾರೆ.



ವಿಧಾನಸೌಧದಲ್ಲಿ ಕಾವೇರಿ ನದಿ ನೀರು ಬಿಡುಗಡೆ ವಿಚಾರವಾಗಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನೀರಿನ ವಿಚಾರವಾಗಿ ನಿತ್ಯವೂ ಜಗಳ ಮಾಡುವುದಕ್ಕಿಂತ, ಮಾತನಾಡಿ ಬಗೆಹರಿಸಿಕೊಳ್ಳಬೇಕು ಎಂಬುದು ನನ್ನ ಆಶಯ. ತಮಿಳುನಾಡು ಮತ್ತು ಕರ್ನಾಟಕದ ಜನ ಪರಸ್ಪರ ಎರಡೂ ಕಡೆ ಜೀವನ ಮಾಡುತ್ತಿದ್ದಾರೆ. ಹೀಗಿದ್ದಾಗ ಜಗಳ ಮಾಡುವುದು ಸರಿಯೇ? ಈ ಹಿಂದೆ ಜೂನ್ 2021ರಲ್ಲಿ ಕುಮಾರಸ್ವಾಮಿ ಅವರು ಟ್ವೀಟ್ ಮೂಲಕ ಇದನ್ನೇ ಹೇಳಿದ್ದರು ಎಂದರು.

ನಮ್ಮ ರಾಜ್ಯಕ್ಕೆ ಕಾವೇರಿ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪೀಠ ರಚನೆ ಮಾಡುತ್ತೇವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಾವು ನಮ್ಮ ರಾಜ್ಯದ ಪರಿಸ್ಥಿತಿ, ವಾಸ್ತವಾಂಶವನ್ನು ನ್ಯಾಯಾಲಯದ ಮುಂದೆ ಇಡುತ್ತೇವೆ. ಆ.31ರವರೆಗೆ ನಿತ್ಯ 10 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಹೇಳಿದ್ದಾರೆ. ನಮಗೆ ಒಟ್ಟು 124 ಟಿಎಂಸಿ ನೀರು ಅಗತ್ಯವಿದೆ. ಆದರೆ ಈಗ ಇರುವುದು ಕೇವಲ 55 ಟಿಎಂಸಿ ಮಾತ್ರ. ಬೆಂಗಳೂರಿಗೆ ಕುಡಿಯಲು 24 ಟಿಎಂಸಿ ನೀರು ಬೇಕು. ಮೈಸೂರು, ಮಂಡ್ಯ, ರಾಮನಗರಕ್ಕೆ 20 ಟಿಎಂಸಿ ಬೇಕು. ಕೆಆರ್‌ಎಸ್‌ನಲ್ಲಿ 22 ಟಿಎಂಸಿ, ಕಬಿನಿಯಲ್ಲಿ 6.5 ಟಿಎಂಸಿ, ಹಾರಂಗಿಯಲ್ಲಿ 7 ಟಿಎಂಸಿ ಹಾಗೂ ಹೇಮಾವತಿಯಲ್ಲಿ 20 ಟಿಎಂಸಿ ನೀರು ಇದೆ ಎಂದು ವಿವರಿಸಿದರು.

## ನೀಟ್ ಪರೀಕ್ಷೆಯಲ್ಲಿ ಸಾಧನೆ: ನದಾಫ ಪಿಂಜಾರ ಸಂಘದಿಂದ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ನೀಟ್ ಪರೀಕ್ಷೆಯಲ್ಲಿ ರಾಜ್ಯ-ಕ್ಕೆ 249ನೇ ರ್‍ಯಾಂಕ್ ಮತ್ತು ಗದಗ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಗಳಿಸಿ ವೈದ್ಯಕೀಯ ದಾಖಲಾತಿ ಪಡೆದುಕೊಂಡ ಕುರ್ತಕೋಟಿ ಸರ್ಕಾರಿ ಮಹಾವಿದ್ಯಾಲಯದ ಉಪನ್ಯಾಸಕ ಡಾ.ವಾಯ್.ಆರ್ ಬೇಲೇರಿಯವರ ಜೇಷ್ಠಪುತ್ರಿ ಸಫೀನಾ ವಾಯ್.ಬೇಲೇರಿಯವರಿಗೆ ಕರ್ನಾಟಕ ರಾಜ್ಯ ನದಾಫ ಪಿಂಜಾರ ಸಂಘದ ಗದಗ ತಾಲ್ಲೂಕಾ ಘಟಕದಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಮುಖ್ಯೋಪಾಧ್ಯಾಯ, ಸಮಾಜದ ಮುಖಂಡ ಕೆ.ಎಫ್ ಹಳ್ಳಾಳ, ಉಪನ್ಯಾಸಕ ಡಾ. ವಾಯ್.ಆರ್ ಬೇಲೇರಿ, ಕೆಪಿಸಿಸಿ ಸಂಯೋಜಕ ನಿಸಾರ್ ಅಹ್ಮದ್ ಖಾಜಿ, ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ ನದಾಫ ವಕೀಲರು, ಘುಜೈಲ್ ನದಾಫ ಮುಂತಾದವರಿದ್ದರು.

## ಹೊಸ ಶಿಕ್ಷಣ ನೀತಿ: ಕೇಂದ್ರಕ್ಕೆ ರಾಜ್ಯ ಸರ್ಕಾರ ತಿರುಗೇಟು



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನಡೆಯುತ್ತಿರುವ ತಿಕ್ಕಾಟ ಬರೀ ಗ್ಯಾರಂಟಿಗಳಿಗೆ ಮೀಸಲಾಗಿ ಉಳಿದಿಲ್ಲ. ಇಬ್ಬರ ಕಿತ್ತಾಟ ಶಿಕ್ಷಣ ನೀತಿಗೂ ಬಂದು ತಲುಪಿ, ಒಬ್ಬರ ಮೇಲೊಬ್ಬರು ಆರೋಪ ಮತ್ತು ಪ್ರತ್ಯಾರೋಪ ಮಾಡುತ್ತಿದ್ದಾರೆ.

ಈ ವೇಳೆ ಸಿಎಂ ಸಿದ್ದರಾಮಯ್ಯ ಅಖಾಡ ಪ್ರವೇಶ ಮಾಡಿದ್ದು, ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿಯ ಕುರಿತು ಮಾಹಿತಿ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸುತ್ತಿದೆ. ಅದೇ ರೀತಿ ಬಿಜೆಪಿ ರಹಿತ ಸರ್ಕಾರಗಳು ಕೂಡ ರಾಷ್ಟ್ರೀಯ ಶಿಕ್ಷಣ ನೀತಿ ವಿರೋಧಿಸುತ್ತಿವೆ. ಹೀಗೆ ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಗೆ ಗೇಟ್‌ಪಾಸ್ ಕೊಡಲು ಸಿದ್ದರಾಮಯ್ಯ ಅವರ ಸರ್ಕಾರ ಸಜ್ಜಾಗಿದೆ. ಈ ಕುರಿತು ಸೋಮವಾರ ಮಹತ್ವದ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ, ಶಿಕ್ಷಣ ನೀತಿ ನಿರೂಪಣೆ ರಾಜ್ಯದ ವಿಷಯ. ಹೀಗಾಗಿಯೇ ಹಳೇ ಶಿಕ್ಷಣ ಪದ್ಧತಿ ಮುಂದುವರೆಸಿ ಹೊಸ ಶಿಕ್ಷಣ ನೀತಿ ರೂಪಿಸಲು ಒಂದು ಸಮಿತಿ ರಚಿಸಲಾಗುವುದು ಎಂದಿದ್ದಾರೆ.

ಶಿಕ್ಷಣ ನೀತಿಯನ್ನ ಹೇರಲು ಹೊರಟಿರುವುದು ಒಂದು ಹುನ್ನಾರ ಎಂದು ಸಿಎಂ ಸಿದ್ದರಾಮಯ್ಯ ಬೇಸರ ಹೊರಹಾಕಿದ್ದಾರೆ. ಬಹು ಸಂಸ್ಕೃತಿ, ಬಹುತ್ವ ಇರುವ ಈ ದೇಶದಲ್ಲಿ ಏಕರೂಪ ಶಿಕ್ಷಣ ವ್ಯವಸ್ಥೆ ಮಾಡಲು ಆಗದು. ಹಳೇ ಶಿಕ್ಷಣ ಪದ್ಧತಿ ಮುಂದುವರೆಸಿ, ಹೊಸ ಶಿಕ್ಷಣ ನೀತಿಯನ್ನ ರೂಪಿಸಲು ಒಂದು ಸಮಿತಿ ರಚಿಸಲಾಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಮೂಲಕ ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಗೆ ರಾಜ್ಯ ಸರ್ಕಾರ ತಿರುಗೇಟು ನೀಡಿದೆ.



ಹರಪನಹಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಒಳ ಹಾಗೂ ಹೊರ ರೋಗಿಗಳಿಗೆ ರಾಜ್ಯ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ದೇವೇಂದ್ರಪ್ಪ ಅವರ ಜನ್ಮದಿನದ ಪ್ರಯುಕ್ತ ಹಣ್ಣು, ಬ್ರೆಡ್ ಹಾಗೂ ಹಾಲನ್ನು ವಿತರಿಸಿದರು. ವಿಜಯನಗರ ಜಿಲ್ಲಾ ಕೆಪಿಸಿಸಿ ಪದವಿಧರ ಕ್ಷೇತ್ರದ ಅಧ್ಯಕ್ಷ ಎಂ.ರಮೇಶ್, ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ಉಪ್ಪಾರ, ಕಾಂಗ್ರೆಸ್ ಮುಖಂಡರಾದ ಎಂ.ಮೋಹನ್, ಮಂಜುನಾಥ, ಯೂನುಸ್, ವಿರೇಶ್ ಎಂ., ವೆಂಕಟೇಶ್, ಶಾರುಕ್.ಪಿ ಮುಂತಾದವರಿದ್ದರು.

## ಟೆಕ್ಕಿ ದಂಪತಿ ಅಸ್ವಾಭಾವಿಕ ಸಾವು: ಮೃತದೇಹ ತರುವ ಪ್ರಕ್ರಿಯೆ ವಿಳಂಬ



■ವಿಜಯಸಾಕ್ಷಿ ಸುದ್ದಿ, ದಾವಣಗೆರೆ

ಅಮೆರಿಕಾದಲ್ಲಿ ದಾವಣಗೆರೆ ಮೂಲದ ದಂಪತಿ ಹಾಗೂ ಮಗು ಸಾವಿನ ಪ್ರಕರಣ ಕುರಿತಂತೆ ಅಲ್ಲಿನ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಹಾಗಾಗಿ, ಮೃತದೇಹ ತರುವ ಪ್ರಕ್ರಿಯೆ ತಡವಾಗುತ್ತಿದೆ. ಸದ್ಯಕ್ಕೆ ಬಂದಿರುವ ಮಾಹಿತಿ ಪ್ರಕಾರ ಅಸ್ವಾಭಾವಿಕ ಸಾವು ಎಂಬುದಾಗಿ ಬಾಲ್ಟಿಮೋರ್ ಕೌಂಟಿ ಪೊಲೀಸರು ತಿಳಿಸಿದ್ದಾರೆ. ತನಿಖೆ ಆಗುತ್ತಿರುವುದರಿಂದ ಇದುವರೆಗೆ ಸ್ಪಷ್ಟ ಮಾಹಿತಿ ಕೊಟ್ಟಿಲ್ಲ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ ವೆಂಕಟೇಶ್ ತಿಳಿಸಿದರು.

ವಿದ್ಯಾನಗರದಲ್ಲಿರುವ ಯೋಗೇಶ್ ಅವರ ಕುಟುಂಬ ವಾಸವಿರುವ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸ್ವಾಂತ್ವನ ಹೇಳಿದ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಪತ್ನಿ ಹಾಗೂ ಮಗುವಿಗೆ ಶೂಟ್ ಮಾಡಿ ಆ ಬಳಿಕ ಯೋಗೇಶ್ ಶೂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬದವರು ಹೇಳುತ್ತಿದ್ದಾರೆ. ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಈ ಪ್ರಕರಣ ಸಂಬಂಧ ಸಂಪೂರ್ಣ ತನಿಖೆ ನಡೆಸಿ ವರದಿ ನೀಡುವುದಾಗಿ ಅಮೆರಿಕಾ ಪೊಲೀಸರಿಂದ ಮಾಹಿತಿ ಸಿಕ್ಕಿದೆ. ಕಾನೂನಿನ ಪ್ರಕಾರ ಮಾಹಿತಿ ನೀಡುತ್ತೇವೆ ಎಂದು ಹೇಳಿದರು.

ನ್ಯೂಯಾರ್ಕ್‌ನ ಅಧಿಕಾರಿ ಮಂಜುನಾಥ್‌ರ ಸಂಪರ್ಕದಲ್ಲಿದ್ದೇವೆ. ಮಾಧ್ಯಮದವರು ಹಾಗೂ ಕುಟುಂಬಸ್ಥರಿಗೆ ಸಾವಿಗೆ ನಿಖರ ಕಾರಣವೇನು ಎಂಬುದು ಗೊತ್ತಾದ ಕೂಡಲೇ ತಿಳಿಸುತ್ತೇವೆ. ತನಿಖೆ ಎಷ್ಟು ದಿನಗಳಲ್ಲಿ ಮುಗಿಯುತ್ತದೆ ಎಂಬ ಆಧಾರದ ಮೇಲೆ ಮೃತದೇಹಗಳನ್ನು ದಾವಣಗೆರೆಗೆ ತರಿಸಿಕೊಳ್ಳುವ ಕುರಿತಂತೆ ಗೊತ್ತಾಗಲಿದೆ. ಈಗಲೇ ಏನನ್ನೂ ಹೇಳಲು ಸಾಧ್ಯವಾಗದು ಎಂದರು.

## ನಾಗಾರಾಧನೆಗೆ ಉಚಿತವಾಗಿ ಜಮೀನು ಕೊಟ್ಟ ಯು.ಟಿ ಖಾದರ್

■ವಿಜಯಸಾಕ್ಷಿ ಸುದ್ದಿ, ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆ ಅಂದಾಕ್ಷಣ ಕೋಮು ಗಲಭೆ, ಹಿಂದೂ-ಮುಸ್ಲಿಂ ರಾಜಕೀಯ ಹೆಚ್ಚು ಸುದ್ದಿಯಾಗುತ್ತದೆ. ಇದೆಲ್ಲದರ ಹೊರತಾಗಿಯೂ ಅಲ್ಲಿ ಹಿಂದೂ-ಮುಸ್ಲಿಂರು ಸೌಹಾರ್ದಯುತವಾಗಿ ಬಾಳ್ವೆ ಮಾಡುತ್ತಿದ್ದಾರೆ. ನಾಗಾರಾಧನೆ ಈ ಭಾಗದ ಶ್ರೇಷ್ಠ ಆಚರಣೆಗಳಲ್ಲೊಂದು. ಅಂತಹ ನಾಗಾರಧನೆಗಾಗಿ ವಿಧಾನಸಭೆ ಸ್ಪೀಕರ್ ಯುಟಿ ಖಾದರ್ ಹಿಂದೂ ಕುಟುಂಬಕ್ಕೆ ಜಮೀನು ಬಿಟ್ಟುಕೊಟ್ಟಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸಮೀಪದ ಪುಣಚ ಪರಿಯಾಲ್ತಡ್ಕದಲ್ಲಿ ಯು.ಟಿ ಖಾದರ್ ಅವರಿಗೆ ಸೇರಿದ ಪಿತ್ರಾರ್ಜಿತ ಜಮೀನು ಇದೆ. ಹಲವು ತಲೆಮಾರುಗಳಿಂದ ಅಲ್ಲಿ ನಾಗಾರಾಧನೆ ನಡೆಯುತ್ತಿತ್ತು ಎಂದು ಹೇಳಲಾಗಿದೆ. ಆ ಜಮೀನಿನ ಒಂದು ಭಾಗದಲ್ಲಿ ಇಂದಿಗೂ ನಾಗಾರಾಧನೆ ನಡೆಸಲಾಗುತ್ತದೆ. ನಾಗರಾಧನೆ ಸ್ಥಳ ಮುಸ್ಲಿಂ ಒಡೆತನದ ಜಮೀನನಲ್ಲಿ ಇದ್ದ ಕಾರಣ ದಳವಾಯಿ ಕುಟುಂಬದವರು ಬೇರೆ ಸ್ಥಳದಲ್ಲಿ ನಾಗಾರಾಧನೆ ಮಾಡುತ್ತಿದ್ದರು. ಮೂಲ ಸ್ಥಾನದಲ್ಲಿ ನಡೆಯುತ್ತಿದ್ದ ಪೂಜೆ ನಿಂತುಹೋಗಿತ್ತು. ಇದರಿಂದ ದಳವಾಯಿ ಕುಟುಂಬಕ್ಕೆ ಸಮಸ್ಯೆ ಕಾಡುತ್ತಿತ್ತು.

ಬೇರೆ ದಾರಿ ಇಲ್ಲದ ಕಾರಣ ದಳವಾಯಿ ಕುಟುಂಬ ನಾಗನಕಟ್ಟೆ ಇರುವ 10 ಸೆಂಟ್ಸ್ ಸ್ಥಳವನ್ನು ಖರೀದಿ ಮಾಡಲು ಮುಂದಾಗಿ, ಯು.ಟಿ ಖಾದರ್ ಅವರಿಗೆ ವಿಚಾರವನ್ನು ತಿಳಿಸಿ ಜಮೀನು ನೀಡುವಂತೆ ಮನವಿ ಮಾಡಿದ್ದರು. ವಿಷಯ ತಿಳಿಯುತ್ತಿದ್ದಂತೆ ಖಾದರ್ 10 ಸೆಂಟ್ಸ್ ಬದಲಾಗಿ 20 ಸೆಂಟ್ಸ್ ಜಾಗವನ್ನು ದಳವಾಯಿ ಕುಟುಂಬಕ್ಕೆ ಉಚಿತವಾಗಿ ಬಿಟ್ಟುಕೊಟ್ಟಿದ್ದಾರೆ. ಇದರೊಂದಿಗೆ ಮೂಲಸ್ಥಾನದಲ್ಲಿ ನಾಗಾರಧನೆ ನಡೆಯಲು ಅನುವು ಮಾಡಿಕೊಟ್ಟಿದ್ದಾರೆ.

### ಬುದ್ಧಿಮಾಂದ್ಯ ಬಾಲಕಿ ಮೇಲೆ ನಡೆದ ಅತ್ಯಾಚಾರ ಖಂಡಿಸಿ ಶ್ರೀರಾಮ ಸೇನೆಯ ಬೃಹತ್ ಪ್ರತಿಭಟನೆ

## ಗದುಗಿನಲ್ಲಿ ಮಹಿಳೆಯರಿಗೆ ಸೂಕ್ತ ರಕ್ಷಣೆಯಿಲ್ಲ

■ವಿಜಯಸಾಕ್ಷಿ ಸುದ್ದಿ, ಗದಗ

ಸಮೀಪದ ಬಿಂಕದಕಟ್ಟಿ ಗ್ರಾಮದ ಹೊರವಲಯದಲ್ಲಿರುವ ಸಾಲು ಮರದ ತಿಮ್ಮಕ್ಕ ಉದ್ಯಾನವನದ ಹತ್ತಿರ ಬುದ್ಧಿಮಾಂದ್ಯ ಬಾಲಕಿಯ ಮೇಲೆ ನಡೆದಿರುವ ಅತ್ಯಾಚಾರ ಪ್ರಕರಣವನ್ನು ಖಂಡಿಸಿ ಶ್ರೀರಾಮ ಸೇನೆಯ ಕಾರ್ಯಕರ್ತರು ಗದಗಿನ ಹುಯಿಲಗೋಳ ನಾರಾಯಣರಾವ್ ವೃತ್ತದಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಸಿದರು.





ಗದಗ ಪರಿಸರದಲ್ಲಿ ಪದೇ ಪದೇ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳನ್ನು ಹತ್ತಿಕ್ಕುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆಯೆಂದು ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀರಾಮ ಸೇನೆಯ ರಾಜ್ಯ ಸಂಚಾಲಕ ರಾಜು ಖಾನಪ್ಪನವರ, ಗದಗ ಪರಿಸರದಲ್ಲಿ ಮಹಿಳೆಯರಿಗೆ ಸೂಕ್ತ ರಕ್ಷಣೆಯಿಲ್ಲದಂತಾಗಿದೆ. ಒಂದು ನಿರ್ದಿಷ್ಟ ಕೋಮಿಗೆ ಸೇರಿದ ಯುವಕರು ಹಿಂದೂ ಮಹಿಳೆಯರನ್ನು ಗುರಿಯಾಗಿಸಿ ಚುಡಾಯಿಸುವದು, ಅತ್ಯಾಚಾರವೆಸಗುವದನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಗೆ ಸಮಗ್ರ ಮಾಹಿತಿಯಿದ್ದರೂ ಸಹ ಪೊಲೀಸ್ ಇಲಾಖೆ ರಾಜಕೀಯ ಕಾರಣಕ್ಕೆ ಮೌನವಾಗಿದೆಯೆಂದು ಆರೋಪಿಸಿದರು.

> ಅಪ್ರಾಪ್ತ ಬುದ್ಧಿಮಾಂದ್ಯ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆಯಾನ್ ಕನಕ್ಯಾನವರ ಅವರಿಗೆ ಗಲ್ಲುಶಿಕ್ಷೆ ವಿಧಿಸಬೇಕು. ಈ ಬಗ್ಗೆ ಪೊಲೀಸ್ ಇಲಾಖೆಯ ಅಧಿಕಾರಿಗಳೂ ವಿಶೇಷ ಮುತುವರ್ಜಿ ವಹಿಸಿ, ಪ್ರಕರಣದ ತನಿಖೆ ನಡೆಸಿ, ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.
>
> **– ರಾಜೂ ಖಾನಪ್ಪನವರ.**
>
> ಶ್ರೀರಾಮ ಸೇನಾ ರಾಜ್ಯ ಕಾರ್ಯದರ್ಶಿ.

ಸಾಲು ಮರದ ತಿಮ್ಮಕ್ಕ ಉದ್ಯಾನವನದ ಹತ್ತಿರ ಬುದ್ಧಿಮಾಂದ್ಯ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಸಂತ್ರಸ್ಥ ಬಾಲಕಿಯ ಕುಟುಂಬಕ್ಕೆ ಒಂದು ಕೋಟಿ ರೂಪಾಯಿಗಳ ಪರಿಹಾರ ನೀಡಬೇಕು. ಏಳು ದಿನದೊಳಗಾಗಿ ಸರಕಾರ ಸಂತ್ರಸ್ಥೆಗೆ ಪರಿಹಾರ ನೀಡದಿದ್ದಲ್ಲಿ ಆ.28ರಂದು ಗದುಗಿನಲ್ಲಿ ಶ್ರೀರಾಮ ಸೇನೆಯ ಕಾರ್ಯಕರ್ತರು ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ ನೇತೃತ್ವದಲ್ಲಿ ಉಗ್ರ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಶ್ರೀರಾಮ ಸೇನೆಯ ಜಿಲ್ಲಾ ಸಂಚಾಲಕ ಮಹೇಶ ರೋಖಡೆ, ಚೇತನ ಅಬ್ಬಿಗೇರಿ, ಕುಮಾರ ಮಿಟ್ಟಿಮಠ, ಕಿರಣ ಹಿರೇಮಠ, ಈಶ್ವರ ಕಾಟವಾ, ವಿರೇಶ ನಾಲ್ವಾಡ, ಅಶೋಕ ಭಜಂತ್ರಿ, ಸೋಮು ಗುಡಿ, ಈರಣ್ಣ ಗಾಣಿಗೇರ, ಕುಮಾರ ನಡಗೇರಿ, ಸಂಜು ಚೆಟ್ಟಿ, ಮಹಾಂತೇಶ ಪಾಟೀಲ, ಶಿವಯೋಗಿ ಹಿರೇಮಠ, ಸುನೀಲ ಮುಳ್ಳಾಳ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka